# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಅಂಶುಮತಿ ಕಲ್ಯಾಣ

# (ಪ್ರದೋಷ ಮಹಾತ್ಮೆ)


ಕವಿ

## ವಿದ್ವಾನ್ ಡಿ. ವಿ. ಹೊಳ್ಳ



ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ

Email: yakshaprasangakosha@gmail.com, yakshavahini@gmail.com Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಸ್ಕಂದ ಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ದಿನೇಶ್ ಪ್ರಿಂಟರ್ಸ್, ಬ್ರಹ್ಮಾವರ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೪೭

**ಪಾತ್ರಗಳು:**

ಸತ್ಯರಥ (ವಿದರ್ಭರಾಜ), ಚಿತ್ರಾಕ್ಷ (ಪಾಂಡ್ಯರಾಜ), ಚಿತ್ರಕೇತ (ಸತ್ಯರಥನ ಮಂತ್ರಿ), ಸಾಲ್ವ, ಧರ್ಮಗುಪ್ತ (ಸತ್ಯರಥನ ಮಗ), ವೀರಬಾಹು (ಸಾಲ್ವನ ಮಂತ್ರಿ), ಸುಶೀಲೆ (ಸತ್ಯರಥನ ಪತ್ನಿ), ಊರ್ಧ್ವಕೇಶಿ (ಸಾಲ್ವನ ಮಗ), ದ್ರುಮಿಳ (ಗಂಧರ್ವರಾಜ), ಭದ್ರಕೇಶಿ (ಸಾಲ್ವನ ಮಂತ್ರಿ), ಶುಚಿವ್ರತ (ವಿಪ್ರಕುಮಾರ), ಕುಂಭಸ್ತನಿ (ಸಾಲ್ವನ ತಂಗಿ), ಈಶ್ವರ, ಶುಕ್ರಾಚಾರ್ಯ (ದೈತ್ಯಗುರು), ವೀರಭದ್ರ, ನಾರದ (ದೇವರ್ಷಿ), ಶಾಂಡಿಲ್ಯ ಋಷಿ, ದುರ್ದಂತ (ಕಿರಾತರಾಜ), ಅಂಶುಮತಿ, ಚಂಡಿಕೆ (ಭದ್ರಕಾಳಿ), ಪಾರ್ವತಿ, ಬ್ರಾಹ್ಮಣ ಸ್ತ್ರೀ, ಅಂಶುಮತಿಯ ಸಖಿಯರು, ಸಾಲ್ವನ ಪತ್ನಿ, ದೂತರು ಇತ್ಯಾದಿ.

**ಕಥಾ ಸಾರಾಂಶ:**

ವಿದರ್ಭ ದೇಶದಲ್ಲಿ ಸತ್ಯರಥನೆಂಬ ರಾಜನು ಸತ್ಯ-ಧರ್ಮದಿಂದ ರಾಜ್ಯವಾಳುತ್ತಿರುತ್ತಾನೆ. ಆತನಿಗೆ ಸುಶೀಲೆಯೆಂಬ ಪತ್ನಿ. ಪಾಂಡ್ಯ ದೇಶದ ದೊರೆ ಚಿತ್ರಾಕ್ಷ ಹಿಂದೆ ತನ್ನ ತಂದೆಯನ್ನು ಕೊಂದ ಹಗೆಯನ್ನು ಸಾಧಿಸುವುದಕ್ಕಾಗಿ ಪಾಂಡ್ಯದ ಮೇಲೆ ದಂಡೆತ್ತಿ ಹೋಗುತ್ತಾನೆ. ಖಾಡಾಖಾಡಿ ಹೋರಾಟ ನಡೆಯುವಾಗ ಮಧ್ಯೆ ಸುರಮುನಿ ನಾರದರು ಪ್ರವೇಶಿಸಿ ಸಾಮವನ್ನು ಬೋಧಿಸಿ ಸಂಧಿಯನ್ನೇರ್ಪಡಿಸುತ್ತಾರೆ.

ಇತ್ತ ಸಾಲ್ವರಾಜನು ಓಲಗದಲ್ಲಿ ತಾನೆಂತಹ ಪರಾಕ್ರಮಿಯೆಂದು ಆತ್ಮಶ್ಲಾಘನೆಯಲ್ಲಿ ತೊಡಗಿಕೊಂಡಿದ್ದಾಗ ಗುರು ಶುಕ್ರಾಚಾರ್ಯರು ವಿದರ್ಭದ ರಾಜ ಸತ್ಯರಥನು ಸಮರ್ಥ ಶೂರನೆಂದಾಗ ಸಾಲ್ವನು ತನ್ನ ಮಂತ್ರಿಮುಖ್ಯ ಸೇನೆಯೊಂದಿಗೆ ರಣಕೆ ಸನ್ನಹನಾಗಿ ದೂತನೊಬ್ಬನ ಕರೆದು ಸಾಮಕ್ಕೆ ಕಪ್ಪವನ್ನು ಒಪ್ಪಿಸಬೇಕೆಂದು ಸಂದೇಶವನ್ನು ಕಳುಹಿಸುತ್ತಾನೆ. ಸತ್ಯರಥನು ಸಾಮವನ್ನು ತಿರಸ್ಕರಿಸಲಾಗಿ, ಸಾಲ್ವ ಹಾಗೂ ಸತ್ಯರಥರಲ್ಲಿ ಸಂಗ್ರಾಮವೇ ನಡೆಯುತ್ತದೆ. ಸಾಲ್ವನು ರಾಜನನ್ನು ಕೊಂದು ವಿದರ್ಭದ ಸಿಂಹಾಸನವನ್ನು ಏರುತ್ತಾನೆ. ದಾಸಿಯರಿಂದ ವಿಷಯವನ್ನು ತಿಳಿದ ಸತ್ಯರಥನ ಪತ್ನಿ ತುಂಬು ಗರ್ಭಿಣಿಯಾದ ಸುಶೀಲೆಯು ತಾನು ಶತ್ರುವಶವಾಗಬಾರದೆಂಬ ಎಚ್ಚರಿಕೆಯಿಂದ ರಾತ್ರಿಯೇ ಯಾರಿಗೂ ತಿಳಿಯದಂತೆ ಅರಮನೆಯನ್ನು ತೊರೆದು ಕಾಡುದಾರಿಯಲ್ಲಿ ಬರುತ್ತಿದ್ದಾಗ ಗಂಡು ಮಗುವಿಗೆ ಜನ್ಮವನ್ನು ನೀಡುತ್ತಾಳೆ. ಮಗುವನ್ನು ಮರದಡಿ ಮಲಗಿಸಿ ದಾಹವನ್ನು ತೀರಿಸಿಕೊಳ್ಳುವುದಕ್ಕಾಗಿ ನೀರಿಗಿಳಿದ ಆಕೆಯನ್ನು ಮೊಸಳೆಯೊಂದು ನುಂಗುತ್ತದೆ. ಅಲ್ಲಿಗೆ ಕಾರ್ಯಾರ್ಥಿಯಾಗಿ ಬಂದ ಉಮೆಯೆಂಬ ಬ್ರಾಹ್ಮಣ ಸ್ತ್ರೀಯೊಬ್ಬಳು ಅನಾಥ ಶಿಶುವನ್ನು ಕಂಡು, ಕೊಂಡುಹೋಗಲು ಅನುಮಾನಗೊಂಡಾಗ, ಸಾಕ್ಷಾತ್ ಪರಶಿವನೇ ವೃದ್ಧಬ್ರಾಹ್ಮಣನಾಗಿ ಬಂದು ಕ್ಷತ್ರಿಯ ಕುಮಾರನಾದ ಮಗುವನ್ನು ಕರೆದೊಯ್ದು ಸಲಹಲು ತಿಳಿಸುತ್ತಾನೆ. ಆಕೆಯು ಆ ಹಸುಮಗುವನ್ನು ತಂದು ತನ್ನ ಮಗ ಶುಚಿವ್ರತನ ಜತೆಜತೆಗೇ ಸಲಹಿ ಧರ್ಮಗುಪ್ತನೆಂದು ನಾಮಕರಣ ಮಾಡುತ್ತಾಳೆ.

ಕೆಲ ಕಾಲ ಕಳೆದಮೇಲೆ ಭಿಕ್ಷಾರ್ಥವಾಗಿ ಉಮೆಯು ಮಕ್ಕಳೊಂದಿಗೆ ಶಾಂಡಿಲ್ಯಮುನಿಯಾಶ್ರಮಕ್ಕೆ ಬಂದ ಸಂದರ್ಭದಲ್ಲಿ ಮಹಾಮುನಿಯು ದಿವ್ಯಜ್ಞಾನದಿಂದ ಎಲ್ಲವನ್ನು ತಿಳಿದು, ಹಿಂದಿನ ಜನ್ಮದಲ್ಲಿ ಈ ಧರ್ಮಗುಪ್ತನು ಪ್ರದೋಷ ವ್ರತಾಚರಣೆಯಲ್ಲಿ ತೊಡಗಿದ್ದಾಗ ಆಕ್ರಮಣವೆಸಗಿದ ಶತ್ರುಗಳನ್ನು ಕೊಂದು ಬಂದ ಈತ ಪೂಜಾ ಪ್ರಸಾದವನ್ನು ಸ್ವೀಕರಿಸದೇ ಊಟಮಾಡಿದ್ದರ ಪ್ರತಿಫಲವಾಗಿ ಅನಾಥನಾಗಿ ಬೆಳೆಯಬೇಕಾದ ಪರಿಸ್ಥಿತಿಯ ಬಗ್ಗೆ ತಿಳಿಸಿ ಅವರಿಗೆ ಪ್ರದೋಷವ್ರತವನ್ನು ಉಪದೇಶಿಸುತ್ತಾರೆ.

ಇತ್ತ ತನ್ನ ವೈರಿ ಸತ್ಯವ್ರಥನ ಪತ್ನಿ ಗಂಡುಮಗುವಿಗೆ ಜನ್ಮ ನೀಡಿದ ವಿಷಯವನ್ನು ತಿಳಿದ ಸಾಲ್ವನು ಆ ಮಗುವನ್ನು ಕೊಲ್ಲಲು ತಂಗಿ ಕುಂಭಸ್ತನಿಯನ್ನು ಕಳಿಸುತ್ತಾನೆ. ಸುಂದರ ಸ್ತ್ರೀರೂಪದಲ್ಲಿ ಬಂದ ಕುಂಭಸ್ತನಿಯು ಮಕ್ಕಳನ್ನು ಕೊಲ್ಲಲೆತ್ನಿಸಿದಾಗ ಶಿವನಾಣತಿಯಂತೆ ಸಾಕ್ಷಾತ್ ಪಾರ್ವತಿಯೇ ಭೈರವಿಯಾಗಿ ಬಂದು ಆ ರಾಕ್ಷಸಿಯನ್ನು ಕೊಲ್ಲುತ್ತಾಳೆ.

ಗಂಧರ್ವರ ರಾಜನಾದ ದ್ರುಮಿಳನ ಪುತ್ರಿಯಾದ ಅಂಶುಮತಿಯು ವನವಿಹಾರಕ್ಕೆ ಭೂಲೋಕಕ್ಕೆ ಬಂದ ಸಂದರ್ಭದಲ್ಲಿ ಧರ್ಮಗುಪ್ತನನ್ನು ಸಂಧಿಸಿ ಮೋಹಿಸುತ್ತಾಳೆ. ಆ ಕಾಡಿನಲ್ಲಿಯೇ ವಾಸವಾಗಿದ್ದ ಸಾಲ್ವಭೂಪನ ಮಿತ್ರನಾದ ದುರ್ದಂತನೆಂಬ ಕಿರಾತನು ಶುಚಿವ್ರತನನ್ನು ಹಿಡಿದಾಗ ಅವನ ಆರ್ತನಾದವನ್ನು ಕೇಳಿದ ಧರ್ಮಗುಪ್ತನು ಕಿರಾತನನ್ನು ಎದುರಿಸುವನು. ಇಬ್ಬರನ್ನೂ ಹಿಡಿದೆಳೆಯುತ್ತಿರುವಾಗ ಪರಶಿವನ ಆದೇಶದಂತೆ ವೀರಭದ್ರನು ಬಂದು ಕಿರಾತನನ್ನು ಕೊಲ್ಲುತ್ತಾನೆ. ಶಿವನು ಗಂಧರ್ವನಿಗೆ ಧರ್ಮಗುಪ್ತನೇ ನಿನ್ನ ಅಳಿಯನಾಗತಕ್ಕವನೆನ್ನುತ್ತಾನೆ. ನಂತರ ವೈಭವದಿಂದ ವಿವಾಹವು ಏರ್ಪಡುತ್ತದೆ.

ದ್ರುಮಿಳನ ಸಲಹೆಯಿಂದ ಮತ್ತು ಶಿವನ ಅಭಯ ಪಡೆದ ಧರ್ಮಗುಪ್ತನು ಸಾಲ್ವನ ಮೇಲೆ ಯುದ್ಧಕ್ಕೆ ತೆರಳುತ್ತಾನೆ. ಯುದ್ಧದಲ್ಲಿ ಸಾಲ್ವನ ಮಗ ಹಾಗೂ ಓರ್ವ ಮಂತ್ರಿ ಸಾವನ್ನಪ್ಪುತ್ತಾರೆ. ಮೊದಲ ದಿನದಲ್ಲಿ ಜಯವು ಅರಸುಗುವರನಿಗೇ ಲಭಿಸುತ್ತದೆ. ರಾತ್ರಿಯಲ್ಲಿ ಕೆಟ್ಟ ಕನಸನ್ನು ಕಂಡ ಸಾಲ್ವನು ಧೃತಿಗೆಟ್ಟು ರಾತ್ರಿಯೇ ಓಲಗವನ್ನು ಸೇರಿಸುತ್ತಾನೆ. ಮಂತ್ರಾಲೋಚನೆಯಲ್ಲಿ ನಿರ್ಣಯಿಸಿದಂತೆ ರಾತ್ರಿಯಲ್ಲಿ ಕೂಟಯುದ್ಧ ಪ್ರಾರಂಭ. ಸಾಲ್ವನ ಘಾತಕ್ಕೆ ಕಂಗೆಟ್ಟ ಅರಸುಗುವರನು ಪಾರ್ವತಿದೇವಿಯನ್ನು ಧ್ಯಾನಿಸಿದ. ದಯೆವೆತ್ತ ಅಗಜೆಯು ಚಂಡಿಕೆಯ ರೂಪದಿಂದ ಬಂದು ರಾಕ್ಷಸ ಸೇನೆಯನ್ನು ಚದುರಿಸುತ್ತಾಳೆ. ಆಮೇಲಿನ ಯುದ್ಧದಲ್ಲಿ ಧರ್ಮಗುಪ್ತನು ವೀರಭದ್ರನ ಸಹಾಯದಿಂದ ಸಾಲ್ವನನ್ನು ಕೊಲ್ಲುತ್ತಾನೆ. ಸುರರ ಸುಮವರ್ಷ. ಜಯಮಾಲೆಯೊಂದಿಗೆ ಅಂಶುಮತಿಯನ್ನು, ಜತೆಗೆ ವಿದರ್ಭಕ್ಕಾಗಮಿಸಿದ ಧರ್ಮಗುಪ್ತನನ್ನು, ಪಟ್ಟಕ್ಕೇರಿಸಿ ಪುರಜನರು ನಲಿಯುತ್ತಾರೆ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ವಿದ್ವಾನ್ ಡಿ. ವಿಷ್ಣು ಹೊಳ್ಳರು (ಕ್ರಿ. ಶ. ೧೯೦೫ – ೧೯೭೦) ಕುಂದಾಪುರದಲ್ಲಿ ಅಧ್ಯಾಪಕರಾಗಿದ್ದರು. ತೆಂಕುತಿಟ್ಟಿನ ಪ್ರಖ್ಯಾತ ಭಾಗವತರಿದ್ದ ಪುತ್ತಿಗೆ ರಾಮಕೃಷ್ಣ ಜೋಯಿಸರ ಸಹೋದರರಿವರು. ಪ್ರಸಂಗಗಳನ್ನಲ್ಲದೇ, ತದ್ಭವಸಂಸ್ಕೃತಕೋಶ, ಸಂಜ್ಞಾರ್ಥತತ್ತ್ವಕೋಶ, ಕೀರ್ತನತರಂಗ, ಶ್ರೀದೇವೀಭಕ್ತಿಸಾರ, ಶ್ರೀಗಣೇಶಭಕ್ತಿಸಾರ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಸ್ವತಃ ಪ್ರಕಾಶಕರಾಗಿ ಅನೇಕ ಪುಸ್ತಕಗಳನ್ನು ಪ್ರಕಾಶಿಸಿದ್ದಾರೆ.

ಇವರು ರಚಿಸಿದ ಪ್ರಸಂಗಗಳು: ಅಕ್ಷಯಾಂಬರ ವಿಲಾಸ (ದ್ರೌಪದೀ ವಸ್ತ್ರಾಪಹಾರ), ಅಂಶುಮತಿ ಕಲ್ಯಾಣ (ಪ್ರದೋಷ ಮಹಾತ್ಮೆ), ಅಶೋಕಸುಂದರಿ ಪರಿಣಯ, ಕಲ್ಕುಡ ಪ್ರತಾಪ, ಕುಂಭಾಶಿ ಕ್ಷೇತ್ರ ಮಹಾತ್ಮೆ, ಕುವಲಯಾಶ್ವ ವಿಜಯ (ಮದಾಲಸಾ ಪರಿಣಯ), ಕೌಸಲ್ಯಾಪರಿಣಯ, ಗಣೇಶಮಹಾತ್ಮೆ, ತುಳಸೀಪರಿಣಯ, ತುಳುನಾಡ ಸಿರಿದೇವಿ (ತುಳುನಾಡ ಸಿರಿ ಮಹಾತ್ಮೆ), ತ್ರಿಪುರಮಥನ (ತ್ರಿಪುರ ಸಂಹಾರ), ದಾನವೀರಕರ್ಣ, ದೇವಪೂಂಜಪ್ರತಾಪ, ಪಾಂಡವರಾಜ್ಯವಿಯೋಗ, ಭೀಮಸೇನಪ್ರತಾಪ, ಮಧುಪುರ ಮಹಾತ್ಮೆ (ಜಯಸಿಂಹೋಪಖ್ಯಾನ ಸಹಿತ), ರಾಮರಾಜ್ಯ, ವೃತ್ರಾಸುರಕಾಳಗ, ಶಲ್ಯಪ್ರತಾಪ, ಶ್ರೀಕೃಷ್ಣವಿಜಯ, ಶ್ರೀದೇವೀಮಹಾತ್ಮೆ, ಶ್ರೀವಿಷ್ಣುಲೀಲೆ (ದಶಾವತಾರ), ಸೀಮಂತಿನೀ ಪರಿಣಯ (ಸೋಮವಾರವ್ರತ ಮಹಾತ್ಮೆ), ವಿಧಿಲೀಲೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಶಾರ್ದೂಲ ವಿಕ್ರೀಡಿತ ವೃತ್ತ**
ಶ್ರೀಮತ್ಸಾಂಬಸುಧಾಂಶುಶೇಖರನುಮಾಕಾಂತೇಶ್ವರಂ ಶಂಕರಂ |
ಸೋಮಾರ್ಕಾನಲನೇತ್ರನಾನತಕುಲೋದ್ಧಾರಂ ತ್ರಿಲೋಕೇಶ್ವರಂ |
ಸೀಮಾತೀತನಧೋಕ್ಷಜಾಪ್ತನಘಸಂಹಾರಂ ದಯಾಸಾಗರಂ |
ಪ್ರೇಮಂಬೆತ್ತು ನಿರಂತರಂ ಪೊರೆಗೆ ಮಾಲಿಂಗೇಶ್ವರಂ ಸರ್ವದಾ || 1 ||

**ನಾಟಿ - ರೂಪಕ**
ಜಯತು ಜಯತು ವಿಘ್ನೇಶ್ವರ |
ಜಯ ಜಯ ಭೂತಾಧೀಶ್ವರ |
ಜಯ ಜಯ ಬುದ್ಧಿಪ್ರದಾತ | ಜಯ ಜಯ ಗಣನಾಥ || ಪಲ್ಲವಿ ||
ಶ್ರೀಗಿರಿಜಾಪುತ್ರನೆ ವರ |
ಯೋಗಿಜನಸ್ತುತಿಪಾತ್ರನೆ |
ನಾಗಾಭರಣನೆ ಸುರ ನರ | ನಾಗಾರ್ಚಿತಚರಣ ||
ಸಾಗರಗಂಭೀರನೆ ವೇ |
ದಾಗಮವೇದ್ಯನೆ ಭವಭಯ |
ಸಾಗರತಾರಕನೇ ಶರ | ಣಾಗತವತ್ಸಲನೇ || 2 ||
ಮನೆ ಮನೆಯೊಪ್ಪಿಪ ಹರಕೆಯ |
ಘನ ಪಾಯಸ ಕಜ್ಜಾಯವ |
ತನಿ ರಸಫಲ ಕ್ಷೀರಾನ್ನವ | ವಿನಯದಿ ಕೈಗೊಂಬಾ ||
ಬೆನಕನೆ ಬಿಂಕಣಿಗಿವಿಯನೆ |
ಜನನ ಮರಣ ಭಯದೂರನೆ |
ನೆನೆಯುವೆ ನಾ ನಿನ್ನಡಿಗಳ | ಅನುಗೊಳಿಸೈ ಶುಭವ || 3 ||
ಸರಸತಿಯೇ ಕೊಡು ಸುಮತಿಯ |
ಗುರು ವಿಬುಧರನೆಚ್ಚರಿಸುವ |
ಪರಮೇಷ್ಠಿಯ ರಾಣಿಯೆ ಭಾ | ಸುರ ವೀಣಾಧರೆಯೆ ||
ತರಳನ ಕೃತಿಯಲಿ ದೋಷವು |
ಬರದಂತೆಯೆ ಪಾಲಿಸು ಶುಭ |
ಕರುಣೆಯೊಳಿನ್ನೀ ರಸನೆಯೊ | ಳಿರು ಪ್ರಾರ್ಥಿಪೆ ನಿನ್ನ || 4 ||

**ಭಾಮಿನಿ**
ಹರಿ ಹರ ಬ್ರಹ್ಮಾಮಹೇಂದ್ರರ |
ತರಣಿ ಚಂದ್ರಾದಿ ಗ್ರಹರ ಶ್ರೀ ಗಿರಿಜೆ |
ಶಾರದೆ ಮುಖ್ಯ ದೇವಿಯರಡಿಯ ಧ್ಯಾನಿಸುತ ||
ವರಕವೀಂದ್ರರ ಗುರುಬುಧಾದ್ಯರ |
ಹಿರಿಯರಂಘ್ರಿಯ ಸ್ಮರಿಸಿ ಪೇಳ್ವೆಪೆ |
ವರ ಪ್ರದೋಷವ್ರತದ ಮಹಿಮೆಯನಭವನೊಲುಮೆಯಲಿ || 5 ||

**ದ್ವಿಪದಿ**
ಆದಿಕವಿ ವಾಲ್ಮೀಕಿ ಬಾದರಾಯಣರ |
ವೇದವಿದ ಭಾಸ ಬಾಣಾದಿ ಕವಿವರರ || 6 ||
ಕನ್ನಡದ ರನ್ನ ಪೊನ್ನಾದಿ ಕಬ್ಬಿಗರ |
ಮಾನ್ಯ ಲಕ್ಷ್ಮೀಶ ಮುದ್ದಣ ಹರೀಶ್ವರರ || 7 ||
ಸ್ಮರಿಸಿ ಪೇಳ್ವೆನು ಶಿವನ ವ್ರತಮಹಾತ್ಮೆಯನು |
ಶರಜ ಪೌರಾಣದಲಿ ನೆಗಳ್ದ ಕಥೆಯನ್ನು || 8 ||
ಸತ್ಯರಥನಳಿಯಲಾ ಸಾಲ್ವನಿಂದವನಾ |
ಪತ್ನಿ ಹೆತ್ತಾ ಧರ್ಮಗುಪ್ತನೆಂಬವನ || 9 ||

ಉಮೆಯೆಂಬ ವಿಪ್ರಸತಿ ರಕ್ಷಿಸಲ್ಕವನು |
ಯಮಿಗಳುಪದೇಶದಿಂದಾಂತು ಬಲವನ್ನು || 10 ||
ಧುರದಿ ಸಾಲ್ವನ ಗೆಲಿದು ರಾಜ್ಯವನು ಪಡೆದು |
ಚರಿತಾರ್ಥನಾದ ವಿವರವ ಪೇಳ್ವೆನೊಸೆದು || 11 ||
ಬಲ್ಲವರು ದೋಷವಿರೆ ತಿದ್ದಿ ಮೆರೆಸುವುದು |
ಗೆಲ್ಲವಹುದೋದಿದರೆ ಶಿವನೊಲಿವ ಮುಂದು || 12 ||

**ಕಂದ ಪದ್ಯ**

ಇತ್ತಲ್ ವಿದರ್ಭದೇಶದಿ |
ಸತ್ಯರಥಂ ಕ್ಷತ್ರಧರ್ಮದೊಳ್ ರಾಜ್ಯಮನಾ ||
ಳುತ್ತಿರಲೊಂದಿನದೊಳ್ ಸಚಿ |
ವೋತ್ತಮನಾ ಚಿತ್ರಕೇತುವೊಡನಿಂತೆಂದಂ || 13 ||

**ಸೌರಾಷ್ಟ್ರ - ತ್ರಿವುಡೆ**

ಮಂತ್ರಿವರ ಕೇಳ್ ರಾಜ್ಯಭಾರವ |
ನಾಂತೆನಾದರು ಮನದೊಳೇಕೋ |
ಶಾಂತಿಯಿಲ್ಲೈ ರಾಜನೀತಿಯ | ದೆಂತೊ ತಿಳಿಯೆ || 14 ||
ದೊರೆತನದಿ ಸುಖವುಂಟೆ ಶತ್ರುಗ |
ಳಿರಲು ಪ್ರಜೆಗಳ ರಂಜಿಸುತ ಜಸ |
ಮೆರೆಸಲಹುದೇ ಸತ್ಯ ಧರ್ಮಾ | ಚರಣೆಯಿಂದ || 15 ||
ಎನಲೊರೆದನಾ ಸಚಿವನಾದ್ಯರ |
ಘನತೆಯರಿದರಸಾಳ್ವನದಿ ಮೇ |
ದಿನಿಯ ಪಾಲಿಸದಿರ್ಪ ಕ್ಷತ್ರಿಯ | ಜನುಮವೇಕೋ ||16 ||
ಕ್ಷಾತ್ರತೇಜದೊಳಳಿದ ಹಿರಿಯರ |
ಕೀರ್ತಿಯನು ಮೇಲೆತ್ತಿ ಹಗೆಗಳ |
ನೊತ್ತಿ ಧರೆಯಾಳ್ವವನೆ ಧನ್ಯನು | ಪಾರ್ಥಿವರಲಿ || 17 ||
ಸತ್ಯರಥನಿಂತೆಂದ ನಿಮ್ಮ ನಿ |
ಜತ್ವವರಿಯಲು ನುಡಿದೆನಲ್ಲದೆ |
ಕ್ಷತ್ರಿಯೋಚಿತ ಧವಳಕೀರ್ತಿಗೆ | ಪಾತ್ರವಹೆನು || 18 ||
ಆದರಯ್ಯನ ಪಾಂಡ್ಯ ದೇಶವ |
ಸಾಧಿಸುತ ರಿಪುಗಳನು ಕೆಡೆಹೊ |
ಯ್ವಾದ ಮೇಲಾದಪುದು ಶಾಂತತೆ | ವಾದವೇನು || 19 ||

**ಭಾಮಿನಿ**

ಬದ್ಧವಿದು ಕೇಳ್ ಚೈತ್ರಯಾತ್ರಗೆ |
ಸಿದ್ಧವಾಗಲಿ ಸುಭಟ ಸಂತತಿ |
ಭದ್ರ ಗಜ ಹಯ ರಥ ಪದಾತಿಗಳೆನೆ ಮಹೋತ್ಸವದಿ ||
ಅಬ್ಧಿಘೋಷದೊಳಖಿಳ ಬಲ ಸ |
ನ್ನದ್ಧಮಾಗಲು ದಿಕ್ತಟಂಗಳ |
ಮಾರ್ದನಿಯೊಳೈದಿದನು ಧರಣಿಪನಧಿಕ ರಭಸದಲಿ || 20 ||

**ಕಂದ ಪದ್ಯ**

ಚಿತ್ರವಿಪುದಖಿಳ ಮುನಿಗಳ್ |
ಸತ್ಯರಥಂ ಪಾಂಡ್ಯದೇಶಕೈತರೆ ಭರದೊಳ್ ||
ಮುತ್ತಿದರಾ ಪುರಮಂ ಸುಭ |
ಟೋತ್ತಮರಿದಿರಾಂತ ಭಟರ ಸದೆಬಡಿಯುತ್ತಂ || 21 ||

**ಕಾಂಬೋಧಿ - ಝಂಪೆ**
ಅನಿತರೊಳಗಾ ಪಾಂಡ್ಯ | ಜನಪನೋಲಗವಿತ್ತು |
ಘನ ರಾಜವಿಷ್ಟರದೊಳಿರಲು ||
ಮಣಿದು ಕೈಮುಗಿದೆಂದ | ರನುಚರರ್ ಶತ್ರುಸಂ |
ದಣೆಗೈದ ಹಾವಳಿಯನಿಂತು || 22 ||
ಜೀಯ ಬಿನ್ನಹ ಶತ್ರು | ರಾಯರೈದಿದರಿತ್ತ |
ಧ್ಯೇಯವಾವುದೊ ಪುರವ ಮುತ್ತಿ ||
ಬಾಯ ಬಿಗಿದೆಮ್ಮವರ | ಸಾಯಬಡಿದಟ್ಟಿದರು |
ಪಾಯವೇನ್ ಬಾಳ್ವ ಬಗೆಯೆಂತೊ || 23 ||
ಚಾರರಿಂತೆನೆ ಮಾರ | ವೈರಿಯಂತಾಕ್ರೋಶ |
ವೇರಿ ಚಿತ್ರಾಕ್ಷನಾರ್ಭಟಿಸಿ ||
ಯಾರಾದರೇಂ ಬರಲಿ | ಮಾರಿಗುಣಲಿಕ್ಕಿ ಜಯ |
ಭೇರಿಯನು ಹೊಯ್ಸಿದಿರೆನೆಂದ || 24 ||
ಕರೆಯಿರೋ ಧುರಸಮ | ರ್ಥರ ದಂಡನಾಯಕರ |
ಕರಿಹಯಾದ್ಯಖಿಳ ಬಲಸಹಿತ ||
ನೆರಹುತೊಟ್ಟಾಗಿ ತರಿ | ದರಿದು ರಿಪುಬಲವ ಯಮ |
ಪುರಕಟ್ಟಬೇಹುದೀಕ್ಷಣಕೆ || 25 ||

**ಮಾರವಿ - ಏಕ**
ಘಳಿಲನೆ ಚಾತು | ರ್ಬಲ ಸಹಿತಾಗಲೆ |
ಬಲು ಭಟರೊಟ್ಟಾಗಿ ||
ಕೊಳುಗುಳಕನುವಾಗಲು ಚಿತ್ರಾಕ್ಷನು |
ಪಲುಗಡಿಯುತಲೆದ್ದ || 26 ||
ಶರಚಾಪವ ಝೇಂ | ಕರಿಸಿ ವಿದರ್ಭನ |
ಸರಭಸಕಿದಿರಾಗಿ ||
ಹರಿಸುತ ರಥವನು | ಬರಲೇನಿಲ್ಲಿಗೆ |
ಧುರಭರವೇಕೆಂದ || 27 ||
ಶತ್ರುತನವ ಮುರಿ | ದೊತ್ತುತ ರಾಜ್ಯವ |
ನೆತ್ತಲು ಬಂದಿಹೆನು ||
ಸತ್ವವಿರಲು ಧನು | ವೆತ್ತುವುದೆಂದನು |
ಸತ್ಯರಥನು ನಗುತ || 28 ||
ಯಾರೆಲೊ ನೀಂ ರಣ | ಧೀರನು ಪೆತ್ತವ |
ನಾರೈ ಹಗೆತನಕೆ ||
ಕಾರಣವೇನೆಂದಾರುಭಟಿಸಿ ಕಿಡಿ |
ಕಾರಿದನಾ ಪಾಂಡ್ಯ || 29 ||

**ಭೈರವಿ - ಅಷ್ಟ**
ಧಿರುರೆ ನೃಪಾಧಮನೇ | ಕೇಳ್ವುದೇನೆ |
ನ್ನರಿಯದಾದೈ ಮೂಢನೆ ||
ವರ ವಿದರ್ಭಾಧಿಪ | ದೊರೆ ಸತ್ಯರಥನ ಸ |
ಚ್ಚರಿತೆಯ ತಿಳಿಯದಾರೈ || 30 ||
ಸತ್ಯರಥನು ನೀನೆಲಾ | ಸತ್ಯಾತ್ಮಗೆ |
ಶತ್ರುಮಿತ್ರರದಾರೆಲಾ ||
ಮಿಥ್ಯಾಚಾರದಿ ಪೂರ್ವ ಶತ್ರುವೆಂದೆನುತೆನ್ನೊಳ್ |
ವ್ಯರ್ಥ ಯುದ್ಧವ ಗೈವೆಯ || 31 ||
ಮರೆತೆಯೇನಜ್ಞಾನದಿ | ನಮ್ಮಯ್ಯನ |
ಧರೆಯಿದೆಂಬುದ ಮನದಿ ||
ಸರಸದೊಳಿತ್ತು ನ | ಮ್ಮರಸಾಳಿಕೆಯಲಿ ವಿ |
ಸ್ತರಿಸುವುದತಿ ಕೀರ್ತಿಯ || 32 ||

ಹೆಣಗಾಡಲೇತಕಯ್ಯ | ನೀ ತಿಳಿಯದೆ |
ಜನಕನ ದುರ್ದಶೆಯ ||
ಘನ ದೈವದ್ರೋಹದಿಂ | ತನುವ ನೀಗಿದನೆಮ್ಮ |
ಳಿನಿತು ವಿರೋಧವೇನೈ || 33 ||
ಸಲ್ಲದಾಮಾತೇತಕೆ | ರಾಜ್ಯವ ಬಿಡ |
ಲೊಲ್ಲೆಯಾದರೆ ಯುದ್ಧಕೆ ||
ನಿಲ್ಲು ನಿಲ್ಲೆಲೊ ರಕ್ತ | ಚೆಲ್ಲಿ ಮೃತ್ಯುವಿಗಿಕ್ಕಿ |
ಸಲ್ಲಿಸಲಿಹೆ ಪಂಥವ || 34 ||
ಬಿಡು ಬಿಡಾ ಗರುವ ವ್ಯರ್ಥ | ಬಾಯ್ಬಡಿವಾರ |
ಕೊಡಹಿ ಸಾಯದಿರು ಧೂರ್ತ ||
ನಿಡುಸರಳುಗಳಿಂದ | ಕೆಡಹಿ ಭೂತಾಹುತಿ |
ಕೊಡದಿರ್ಪೆನೇ ಮರುಳೆ || 35 ||
ಎನುತ ಕಾರ್ಮುಳೆಯಂದದಿ | ಕೂರ್ಗಣೆಗಳ |
ಕನಲುತೆಚ್ಚನು ರೋಷದಿ ||
ಕ್ಷಣದಿ ಖಂಡಿಸಿ ಪ್ರತಿ | ಕಣೆಗಳ ತೆಗೆದೆಚ್ಚ |
ನನಿತರೊಳ್ ವೈದರ್ಭನು || 36 ||

**ಭಾಮಿನಿ**
ನುಡಿವುದೇನಮರೇಂದ್ರರಭ್ರದಿ |
ನಡುಗುವಂದದೊಳುಭಯರಾಯರು |
ಕಡುಹಿನಿಂದೆಚ್ಚಾಡಿದರು ಭುಜಬಲದೊಳಿದಿರಾಗಿ ||
ಪೊಡವಿಯಲ್ಲಾಡಲ್ಕೆ ವೀಣೆಯ |
ನುಡಿಸುತಾ ನಾರದನು ನಿರ್ಭರ |
ದೊಡನೆ ನಡೆತಂದಿರ್ವರನು ತಡೆದೆಂದನೀತೆರದಿ || 37 ||

**ಮುಖಾರಿ - ಏಕ**
ಓಹೋ ಇದೇನಿದು ಕೋಲಾಹಲವು | ಹೋರಟೆಯಬ್ಬರವು || ಪ ||
ಓಹೊ ಇದೇನ್ಮಹ | ಬಾಹುಜರಿರ್ವರು |
ಆಹವಗೆಯ್ಯುವ | ಸಾಹಸವಚ್ಚರಿ || ಅ.ಪ. ||
ಧಾತ್ರೀಶರ್ ಕಾದಲೇತಕಿಂತು | ಶಸ್ತ್ರಾಸ್ತ್ರಗಳಾಂತು |
ಸ್ವಾರ್ಥವೃತ್ತಿಯಲಿ | ಬಯಲ ಭ್ರಾಂತು ||
ಧೂರ್ತ ದುರಾತ್ಮರ ಕೃತ್ಯವಿದೈ ಜನ |
ಹತ್ಯೆಯನೆಸಗುವ | ಬಾಳ್ವೆಯದೇಂ ಸುಡಿ |
ಕ್ಷತ್ರಗುಣದಿ ನೃಪರುತ್ತಮ ಕೀರ್ತಿಯ |
ಮಿತ್ರತ್ವವ ಬಿಡದೆತ್ತಲು ಬೇಕೇ || 38 ||

**ವಾರ್ಧಕ**
ಎಂದುಭಯರಾಯರುದ್ರಿಕ್ತ ಕೋಪಾಗ್ನಿ ತಣಿ |
ವಂದದಿಂ ನಯ ನೀತಿ ತತ್ವಂಗಳರುಹುತಾ |
ನಂದದಿಂದನ್ಯೋನ್ಯಭಾವದಿಂದಿರುವವೋಲ್ ಸಂಧಿಯನ್ನೇರ್ಪಡಿಸುತ ||
ವೃಂದಾರಕೇಂದ್ರಮುನಿಯಭ್ರಾಂಗಣವನೇರ |
ಲಂದದಿಂ ಸತ್ಯರಥನತಿವಿಭವದಿಂ ರಾಜ |
ಮಂದಿರಕ್ಕೈತಂದು ಸತ್ಯ ಧರ್ಮಾಚರಣೆಯಿಂದಾಳುತಿರ್ದನಿಳೆಯ || 39 ||

**ಸೌರಾಷ್ಟ್ರ - ತ್ರಿವುಡೆ**
ಇತ್ತಲಾ ಸಾಲ್ವಾಖ್ಯನೊಂದಿನ |
ಅತ್ಯಧಿಕ ವೈಭವದೊಳೋಲಗ |
ವಿತ್ತನಾಪ್ತರ ಪುರಪ್ರಧಾನರ | ಮೊತ್ತದೊಡನೆ || 40 ||

ಗುರುಜನರ ಸಚಿವಾದಿ ಭೃತ್ಯರ |
ಪರಿಕಿಸುತಲೆಂತೆಂದನಿಳೆಯೊಳು |
ಸರಿಯದಾರೆನಗವನಿಪಾಲರ | ನೆರವಿಯೊಳಗೆ || 41 ||
ಯಾರು ಸತ್ಯಾಧಿಕರು ಸಮಬಲ |
ರಾರು ರಾಜಾದಿತ್ಯನೆನ್ನನು |
ಮೀರುವಸಮಬಲಾಢ್ಯರುಂಟೇ | ಧಾರಿಣಿಯಲಿ || 42 ||
ಎನಲು ಭೃಗುಸುತನೆಂದನವನಿಯೊ |
ಳೆನಗೆ ಸಮಬಲರಿಲ್ಲವೆಂಬತಿ |
ಘನ ಗರುವವೇಕೈ ಪ್ರತಿಷ್ಠಿತ | ಜನಪರಿಹರು || 43 ||
ತಿಳಿಯದೇನು ವಿದರ್ಭದೇಶದೊ |
ಳಿಳೆಯನಾಳ್ವ ಸತ್ಯರಥನೆಂ |
ಬಲಘುಮತಿಯುತಗಾರು ಸರಿದೊರೆ | ಬಲಭುಜರಲಿ || 44 ||
ಏನಿದಚ್ಚರಿ ಸತ್ಯರಥನೆಂ |
ಬಾ ನರಾಧಿಪನಧಿಕನೇ ಫಡ |
ಗೋಣಮುರಿದಟ್ಟುವೆನು ಜವನಾ | ಸ್ಥಾನದೆಡೆಗೆ || 45 ||
ಇಂತು ಸಾಲ್ವನು ವೀರಬಾಹುಕ |
ಮಂತ್ರಿಯನು ಕರೆದೆಂದನನಿಮಿಷ |
ತಿಂತಿಣಿಯು ನಡುಗಲ್ಕೆ ಭೈರವ | ನಂತೆ ಕನಲ್ದು || 46 ||

**ಕೇದಾರಗೌಳ - ಝಂಪೆ**

ಇತ್ತ ಕೇಳ್ ಮಂತ್ರಿವರ್ಯ | ಆಚಾರ್ಯ |
ರೆತ್ತಿ ಪೇಳಿದ ವಾರ್ತೆಯ ||
ಸತ್ಯರಥ ನೃಪನಿಳೆಯೊಳು | ಎನಗಿಂತ |
ಲತ್ಯಧಿಕನಂತೆ ಕೇಳು || 47 ||
ಎನ್ನ ಸರಿಮಿಗಿಲೆನಿಸುತ | ಬಾಳ್ವರಸ |
ರಿನ್ನಿರಲು ಬಹುದೆ ಮತ್ತಾ ||
ಸೈನ್ಯವೈದಲಿ ಕ್ಷಿಪ್ರದಿ | ವೈದರ್ಭ |
ನನ್ನಿಕ್ಕಬೇಕು ಧುರದಿ || 48 ||
ಕಳುಹಿಸೈ ದೂತರನ್ನು | ಮುಂದಾಗಿ |
ತಿಳಿಯಬೇಕವನಿರವನು ||
ಅಳವಿಗೊಡುವನೊ ಕಪ್ಪವ | ತೆತ್ತಪನೊ |
ಛಲವಾವುದೆಂಬ ನಿಜವ || 49 ||
ಇಂತೆನಲಮಾತ್ಯವರನು | ರಾಜಾಜ್ಞೆ |
ಯಂತೆ ಕಳುಹಲು ಚರರನು ||
ಶಾಂತಚಿತ್ತದಿ ಸಾರ್ದರು | ಸತ್ಯರಥ |
ನಂತಿಕಕೆ ಭರದೊಳವರು || 50 ||

**ಕೇದಾರಗೌಳ - ಅಷ್ಟ**

ದೊರೆಯಾಜ್ಞೆಯಂತೆ ದೂ | ತರು ಸತ್ಯರಥ ಭೂಮೀ |
ಶ್ವರನಾಸ್ಥಾನವನು ಸೇರಿ ||
ಶಿರಬಾಗಿ ನಮಿಸುತ್ತ | ಕರಗಳ ಮುಗಿದು ನಿಂ |
ದರು ಭಯ ಭಕ್ತಿಯೊಳು || 51 ||
ಕರೆದೆಂದನಾ ಧಾತ್ರೀ | ವರನು ದೂತರನಿಲ್ಲಿ |
ಬರಲೇನು ಕಾರಣವು ||
ಇರುವ ಠಾವೆಲ್ಲಿ ನಿ | ಮ್ಮರಸನಾರ್ ಕಾರ್ಯದ |
ಭರವನು ಪೇಳಿರೆಂದು || 52 ||

ಧರಣಿಪ ಸಾಲ್ವನೆ | ಮ್ಮರಸನು ರಾಜಾಜ್ಞೆ |
ಯರುಹಲೈತಂದೆವಿಲ್ಲಿ ||
ನಿರತ ಕಪ್ಪವನಿತ್ತಾ | ದರದಲಿ ಸಾವಂತ |
ದೊರೆಯಾಗಿ ಬಾಳ್ವುದೆಂದು || 53 ||
ಕಪ್ಪವೀವೆಯೊ ಕಾದ | ಲಿರ್ಪೆಯೊ ಪೇಳ್ವುದೆಂ |
ದೊಳ್ಪಿನಿಂದರುಹಲಾಗ ||
ಕಪ್ಪಕಾಣ್ಕೆಯನೀವ | ನಿಷ್ಪ್ರಭನಲ್ಲೆಂದು |
ಚಪ್ಪರಿಸಿದ ಭೂಪನು || 54 ||

**ಕಂದ ಪದ್ಯ**
ಇಂತೆನೆ ಸತ್ಯರಥಂ ಸಮ |
ನಂತರದೊಳ್ ದೂತರೈದಿ ನಡೆದಾ ಕಥನಂ ||
ತಾಂ ತಿಳುಪಲ್ ಸಾಲ್ವಂ ತ್ರಿಪು |
ರಾಂತಕನೊಲ್ಮೆಸಗುತೆಂದನಾ ಮಂತ್ರಿಯೊಳಂ || 55 ||

**ನಾದನಾಮಕ್ರಿಯೆ - ಅಷ್ಟ**
ಮತಿವಂತ ಮಂತ್ರಿ ನೀ ಕೇಳ್ದೆಯಾ | ಸತ್ಯ|
ರಥನುದ್ಧತಿಕೆಯ ನೀನರಿತೆಯಾ ||
ಹಿತದೊಳು ಕಪ್ಪವೊಪ್ಪಿಸನಂತೆ | ಇದಿ|
ರಾಂತು ಹೋರಾಡಲಿರ್ದಪನಂತೆ || 56 ||
ಸಿದ್ಧವಾಗಲಿ ಚತುರ್ಬಲಗಳು | ಸ |
ನ್ನದ್ಧರಾಗಲಿ ಸುಭಟರ್ಕಳು ||
ಯುದ್ಧದಿ ಪರಬಲವಳಿಸುತ | ವಿಜ |
ಯಧ್ವಜ ಹಾರಿಸಿ ಬಹುದಿತ್ತ || 57 ||
ಎನಲೆಂದನಾ ಮಂತ್ರಿವರ್ಯನು | ನಮ್ಮ |
ಗಣಿಸದಾದನೆ ಕ್ಷುದ್ರಭೂಪನು ||
ಬಣಗು ಭೂಪರಿಗಷ್ಟು ಬಲುಹಾಗೆ | ನಮ್ಮ |
ಘನತೆ ಸುಡಲಿ ಬಾಳ್ವುದು ಹೇಗೆ || 58 ||
ನಡೆಯಲೆಮ್ಮಖಿಳ ಸೇನೆಯು ಮುನ್ನ | ಸದೆ |
ಬಡಿದಿಕ್ಕಲಹಿತರ ಬಲವನ್ನ ||
ತಡೆಯಲೇಕೆಂದು ಹೂಂಕರಿಸುತ | ಖಡ್ಗ |
ಹಿಡಿದೆದ್ದನಾ ಮಂತ್ರಿ ಕನಲುತ || 59 ||

**ಶಂಕರಾಭರಣ - ಮಟ್ಟೆ**
ಪೇಳಲೇನಜಾಂಡ ಬಿರಿವ |
ವೋಲು ಸಾಲ್ವನಾರ್ಭಟಿಸುತ |
ಕಾಳಗಕ್ಕೈತಂದ ಚತು | ರ್ಬಲವ ನೆರಹುತ ||
ಧೂಳಿಯೆರಚುತಾ ಕೃತಾಂತ |
ನಾಳ್ಗಳೆನೆ ವಿದರ್ಭಪುರದಿ |
ದಾಳಿಗೊಟ್ಟರಸುರಭಟರು | ರ್ಕಾಳುತನದಲಿ || 60 ||
ಧೂರ್ತಖಳರೀತೆರದಿ ಲಗ್ಗೆ |
ಹತ್ತಿ ಸುತ್ತಿಸುಳಿದು ಪುರವ |
ಮುತ್ತಿ ಧಾಳಾಧೂಳಿಗೈದ | ರತ್ತಲಿತ್ತಲು ||
ಆರ್ತನಾದವೆತ್ತು ರಾಜ |
ಭೃತ್ಯರೈದಿ ಭಯವ ಬಿತ್ತಿ |
ಸತ್ಯರಥನ ಪಾದಕೆರಗಿ | ಬಿತ್ತರಿಸಿದರು || 61 ||

**ಭಾಮಿನಿ**
ಚಿತ್ರವಿಪುದೆಮ್ಮರಿಕೆಯನು ಭೂ |
ಪೋತ್ರಮನೆ ರಿಪುರಾಯರಂತಕ |
ಭೃತ್ಯರೆನೆ ದಂಡೆತ್ತಿ ಬಂದಿಹರಖಿಳ ಬಲಸಹಿತ ||
ಹತ್ತಿ ದುರ್ಗವನೊತ್ತಿ ಪುರಜನ |
ಮೊತ್ತವನು ಬೆಂಬತ್ತಲೈದಿದೆ |
ವಿತ್ತ ನಿಮ್ಮಡಿಗರುಹಲಿನ್ನೇನಿಹುದೊ ದುರ್ವಿಧಿಯು || 62 ||

**ಭೈರವಿ - ಏಕ**
ಇಂತೆನೆ ನೃಪನದ ಕೇಳ್ದು | ತ್ರಿಪು |
ರಾಂತಕನಂದದಿ ಕನಲ್ದು ||
ಶಾಂತಿಯದೇಂ ರಿಪುಗಳನು | ಭೂತ |
ಸಂತತಿಗುಣಬಡಿಸುವೆನು || 63 ||
ಬರಲೈ ಪಟುಭಟರೆಲ್ಲ | ನಿ |
ರ್ಭರದಿ ಚತುರ್ಬಲವೆಲ್ಲ |
ಪರಬಲವನು ಸೊಪ್ಪರಿದು | ಯಮ |
ಪುರಕಟ್ಟುತ ನಡೆತಹುದು || 64 ||
ಒಡನೆ ಮಹಾಬಲವೆಲ್ಲ | ಬಂ |
ದೊಡಗೂಡಲು ರಣಮಲ್ಲ |
ಪಡೆಯೊಡನೈದಿದನತ್ತ | ನೆಲ |
ನೊಡೆವೋಲ್ ಭೋರ್ಗುಡಿಸುತ್ತ || 65 ||

**ಕಂದ ಪದ್ಯ**
ಅನಿತರೊಳು ವೀರಬಾಹುಕ |
ಘನರೋಷವನಾಂತು ಮುಂದೈತರಲಾ ||
ಕ್ಷಣದೊಳ್ ಚಿತ್ರಧ್ವಜನಾ |
ಧನುವಂ ಝೇಂಕರಿಸುತೆಂದನಾ ದನುಜನೊಳಂ || 66 ||

**ಭೈರವಿ - ಮಟ್ಟೆ**
ಯಾರು ನೀನು ಘೋರಾಕೃತಿಯ | ತೋರುತಿರ್ಪವ |
ಕ್ರೂರತನದಿ ಪುರವ ಮುತ್ತಿ | ಸೂರೆಗೈದವ ||
ಶೂರಸಾಲ್ವನೃಪನಮಾತ್ಯ | ವೀರಬಾಹುವ |
ಚಾರಿತ್ರವನು ಬಲ್ಲೆಯಾ ನೀ | ನಾರು ಕೇಳ್ವವ || 67 ||
ಸತ್ಯರಥನಮಾತ್ಯವರ್ಯ | ಚಿತ್ರಕೇತುವಾ |
ಚಿತ್ರಚರಿತೆಯರಿವೆಯಾ ದು | ರಾತ್ಮದಾನವ ||
ವ್ಯರ್ಥಗಳಿದು ಸಾಕು ಕಪ್ಪ | ವಿತ್ತು ಬಾಳ್ವರೇ |
ಶತ್ರುತನದೊಳೆಮ್ಮ ಗೆಲುವ | ಶಕ್ತರಿರುವರೇ || 68 ||
ದುರುಳ ಕೇಳಿತ್ತಪೆವು ಕಪ್ಪ | ವುರುತರಾಸ್ತ್ರದಿ |
ಬರಿದೆ ಮೃತ್ಯುವಿಗೆ ತುತ್ತಾಗ | ದಿರು ವಿದ್ವೇಷದಿ ||
ಗರುವೋದ್ರೇಕದಿಂದ ಪ್ರಾಣ | ತೊರೆಯದಿರು ಛಲಾ |
ಧುರದೊಳೆಮ್ಮ ಗೆಲಿದು ಬಾಳ್ವ | ದೊರೆಗಳಾರೆಲಾ || 69 ||
ಅನಿತು ಸತ್ವವಿರಲು ನೋಳ್ಪ | ನೆನುತ ಚಿತ್ರನು |
ಧನುವ ಝೇಗೈದು ಸುರಿದ | ಕಣೆಯ ಮಳೆಯನು ||
ಕನಲ್ದು ವೀರಬಾಹು ತತ್ | ಕ್ಷಣದಿ ಮುರಿಯುತ |
ಘನತರಾಸ್ತ್ರವೆಸೆದನಭವ | ನೆನಲು ಮಸಗುತ || 70 ||

**ಸೌರಾಷ್ಟ್ರ - ತ್ರಿವುಡೆ**

ವೀರಬಾಹುವಿನಸ್ತ್ರಘಾತದಿ |
ಧಾರಿಣಿಯೊಳೊರಗಲ್ಕೆ ಮಂತ್ರಿಯು |
ಮಾರಹರನೆನೆ ಸತ್ಯರಥನುರಿ | ಕಾರುತೆಂದ || 71 ||
ಧಿರುರೆ ದುಷ್ಟದುರಾತ್ಮನೆಮ್ಮೀ |
ಪುರವ ಮುತ್ತುತ ಸಾಧುವರ್ಗವ |
ನುರಿಸಿದತಿಪಾತಕಕೆ ಶಿಕ್ಷೆಯ | ತೆರುವನಿದಕೋ || 72 ||
ಯಾರು ನೀಂ ಹಮ್ಮೀರಿ ಗಜರ |
ಲ್ಯಾರು ನಮ್ಮಧಿಕಾರವರಿಯದೆ |
ಮಾರರಿಪುವಿಂಗಾದರೆಮ್ಮೊಳು | ಹೋರಲರಿದು || 73 ||
ಸತ್ಯಧರ್ಮದೊಳಾಳುತಿರಲೆ |
ಮ್ಮತ್ತ ದಂಡೆತ್ತುವರೆ ಧರ್ಮಿಗ |
ಳೆತ್ತಣದು ವಿದ್ರೋಹವೊ ಪರ | ಮಾರ್ಥವರಿಯೆ || 74 ||
ಕಪ್ಪಕಾಣ್ಕೆಗಳೊಡನೆ ರಾಜ್ಯವ |
ನಪ್ಪುಗೈವವಸರದಿ ಬಂದಿರೆ |
ತಪ್ಪದಾವುದು ಕಾದಿ ಮಡಿವಾ | ದರ್ಪ ಸುಡಲೈ || 75 ||
ಕಪ್ಪವೀವೆವು ಶಸ್ತ್ರ ಮುಖದಿಂ |
ದೊಪ್ಪಿಪೆವು ಯಮನೆಡೆಗೆ ಮುನಿದರೆ |
ದರ್ಪಕಾರಿಯೆ ಬರಲಿ ರಿಪುಕುಲ | ಸೊಪ್ಪರಿವೆವು || 76 ||
ಎಂದು ಕೋಪಾಟೋಪದಿಂದೊಣೆ |
ಯಿಂದ ತೆಗೆದೆಚ್ಚನು ಮಹಾಸ್ತ್ರವ |
ಮಂದಮತಿಯದ ತರಿದು ಪ್ರತಿಶರ | ವೃಂದವೆಸೆದ || 77 ||
ಸತ್ಯರಥನುರಿಮಸಗುತಾ ಕದ |
ನತ್ರಿಣೇತ್ರನ ತೆರದಿ ಶಕ್ತಿಯ |
ನೆತ್ತಿ ಬಿಸುಟನು ದಿಗ್ಗಜಾವಳಿ | ತತ್ತರಿಸಲು || 78 ||

**ಕಂದ ಪದ್ಯ**

ಇಂತಾಶಕ್ತಿಯ ಭರಮಂ |
ತಾಂ ತಡೆಯದೆ ವೀರಬಾಹುದಾನವನಾಗಳ್ ||
ಪಿಂತೆರಳಲ್ ಸಾಲ್ವಂ ಮಾ |
ರಾಂತು ವಿದರ್ಭಾಧಿಪತಿಯ ತಡೆದಿಂತೆಂದಂ || 79 ||

**ಭೈರವಿ - ಝಂಪೆ**

ಯಾರು ನೀಂ ಸತ್ಯರಥ | ಧಾರಿಣಿಪನೇನೊ ಮದ |
ವೇರಿ ನಿಂದೈ ಸತ್ವ ತೋರಲಾಹವದಿ || 80 ||
ಯಾರಾದರೇಂ ಪುರವ | ನೇರಿ ಬಂದಧಮರಿಗೆ |
ತೋರಲಿರ್ದಪೆನು ಯಮ | ನೂರನೀಕ್ಷಣಕೆ || 81 ||
ತಿಳಿಯದಾದೈ ಸಾಲ್ವ | ನಳವ ಭೂಭುಜರೆಲ್ಲ |
ತಿಳಿದಿರಲು ಸೆಣಸಾಡಿ | ಗೆಲಿದು ಬಾಳ್ವಪೆಯಾ || 82 ||
ತಿಳಿಯದುಂಟೇ ದೈತ್ಯ | ರಳವ ದಾಸ್ಯದಿ ಮಾನ |
ಕಳೆದುಳಿವ ರಾಯರ | ಗ್ಗಳಿಕೆ ಹೊಲ್ಲೆಹವು || 83 ||
ಛಲವೇತಕಿನ್ನಾದ | ರಿಳೆಯನಿತ್ತರೆ ಲೇಸು |
ಬಲುಹ ತೋರ್ದರೆ ಮಾರಿ | ಬಳಗಕುಣಿಸುವೆನು || 84 ||
ಇಳೆಯನಿತ್ತಪೆನೆ ಫಡ | ಬಲು ಶಿಳೀಮುಖಗಳಿಂ |
ಬಲವಿರಲು ಕೊಳ್ಳೆನುತ | ಪಿಳುಂಕ ತೆಗೆದೆಚ್ಚ || 85 ||

**ಮಾರವಿ - ಏಕ**
ದೈತ್ಯಾಧಮನದ | ಕತ್ತರಿಸುತ ಮೇ |
ಘಾಸ್ತ್ರವ ಸೆಳೆದೆಸೆಯೆ ||
ಪೃಥ್ವಿಪನಾ ಪವ | ನಾಸ್ತ್ರದೊಳಂಬರ |
ದತ್ತಲು ಹಾರಿಸಿದ || 86 ||
ಮರುತಾಸ್ತ್ರವ ಬಿಡ | ಉರಗಾಸ್ತ್ರದಿ ಮ |
ತ್ತೆರಗಲು ಫಣಿಶರವ ||
ಗರುಡಕಳಂಬದಿ | ತರಿಯಲು ಪಾವಕ |
ಶರವೆಚ್ಚನು ಸಾಲ್ವ || 87 ||
ಉರಿಯುಗುಳತಲೈ | ತರುವನಲಾಸ್ತ್ರವ |
ವರುಣಾಸ್ತ್ರದೊಳಳಿಸೆ ||
ಬರಿದಾಗಲು ಬಲು | ಶರಗಳು ಗದೆಗೊಂ |
ಡೆರಗಿದನಾಖಳನು || 88 ||

**ಕಂದ ಪದ್ಯ**
ಮೃಡನೊಲ್ ಕೆಂಗಿಡಿಯುಗುಳುತ |
ದಡಿಗಂ ಬಲ್ಗದೆಯನೆತ್ತಿ ಹೊಯ್ದಾ ಭರದಿಂ ||
ಪೊಡವಿಪನೊರಗಲ್ ಧಾತ್ರಿಗೆ |
ಬಿಡುಗಣ್ಣರ್ ವ್ಯೋಮ ಪಥದಿ ಹಾಯೆಂದಳಲ್ದರ್ || 89 ||

**ಭಾಮಿನಿ**
ಬಿತ್ತರಿಸಲೇನರಸನಂತ್ಯದೊ |
ಳಸ್ತಮಿಸಲಾದಿತ್ಯನಾ ದಿನ |
ಹೊತ್ತ ಚಿಂತೆಯೊಳೋಡಿದರು ಕಂಡೆಡೆಗೆ ಪುರಜನರು ||
ಧೂರ್ತನಾಗಳೆ ಮಂತ್ರಿ ಮುಖ್ಯ ಸ |
ಮಸ್ತರೊಡನುತ್ಸಾಹ ಚಿತ್ತದಿ |
ಹತ್ತಿದನು ಭದ್ರಾಸನವನಾತೋದ್ಯನಾದದಲಿ || 90 ||

**ಸಾಂಗತ್ಯ - ರೂಪಕ**
ಇತ್ತಲಾ ಪುರಜನ | ರಾರ್ತನಾದದೊಳತ್ತ |
ಲಿತ್ತಲೈದುತ್ತಿರಲನಕ ||
ಸತ್ಯರಥನ ಧರ್ಮ | ಪತ್ನಿಗೀ ವಾರ್ತೆಯ |
ಬಿತ್ತರಿಸಿದರಬಲೆಯರು || 91 ||
ಸಿಡಿಲೆರಗಿದ ಬಾಳೆ | ಗಿಡದಂತೆ ಮೂರ್ಛೆಗೊಂ |
ಡೊಡನೆ ಸುಶೀಲೆ ಸ್ಮೃತಿಯಾಂತು ||
ನಡುಗುತ್ತ ದುಃಖಿದಾ | ಕಡಲೊಳೀಸಾಡುತ್ತ |
ನಡೆದೆದ್ದಳರಮನೆಯಿಂದ || 92 ||
ನಟ್ಟಿರುಳಲಿ ಪೊರ | ಮಟ್ಟು ದುರಾತ್ಮರ |
ದೃಷ್ಟಿಪಥಕೆ ಬೀಳದಂತೆ ||
ಪಟ್ಟಣ ಬಿಟ್ಟು ಕಂ | ಗೆಟ್ಟು ಸಾರ್ದಳು ಕಲ್ಲು |
ಬೆಟ್ಟಗುಡ್ಡಗಳ ಹತ್ತಿಳಿದು || 93 ||
ನಡೆಯಲಾರ್ಪಳೆ ಗರ್ಭ | ಕಡಸಿರೆ ನವಮಾಸ |
ವಡವಿಯ ಕಲ್ಮುಳ್ಳುಗಳಲಿ ||
ನಡೆಗೆಟ್ಟು ಹಾಯೆಂದು | ಮೃಡನೆ ರಕ್ಷಿಪುದೆಂದು |
ಕಡುಬಿಸುಸುಯ್ದಳಾಸುದತಿ || 94 ||

**ನೀಲಾಂಬರಿ - ಆದಿ (ಏನಯ್ಯಾ ಪವನಜನೆ)**

ಹರ ಹರ ಮಹಾದೇವನೆ | ಮೃತ್ಯುಂಜಯನೆ |
ಸರುವ ಲೋಕಾಧೀಶನೆ ||
ಮರೆತೆಯಾ ಭಕ್ತರನ್ನು | ದೈತ್ಯಾಧಮರ |
ನೆರವಿಯ ಕಾಯ್ವೆಯೇನು || 95 ||
ಸತ್ಯಧರ್ಮದಿ ರಾಜ್ಯವ | ಪಾಲಿಸಲೇನು |
ಮೃತ್ಯು ಬಂತಲ್ಲೊ ದೇವ ||
ಭರ್ತಾರನಳಿದ ಮೇಲೆ | ಜೀವಿಪುದೇಕೊ |
ಪೃಥ್ವಿಗೆ ಭಾರವಲ್ತೆ || 96 ||
ಯಾವ ಪಾಪವ ಗೈದೆನೊ | ಜನ್ಮಾಂತರದೊ |
ಳಾವಳ ವಧೆಗೈದೆನೊ ||
ಈ ವಿಧ ವಿಧವತ್ವದ | ದುರ್ಗತಿಗೆ ಬೀಳ |
ಲಾವುದರಿಯೆ ಮನದಿ || 97 ||
ಮೃತ್ಯುವೇತಕೆ ಬಾರದು | ಪತಿಯೊಡನೇಕೆ |
ನ್ನಾತ್ಮವು ಬಲಿಯಾಗದು ||
ಸತ್ತಪೆನೆನಲಮ್ಮೆನು | ಒಡಲೊಳು ಗರ್ಭ|
ಹೊತ್ತಿರಲೇಂ ಮಾಳ್ಪೆನು || 98 ||
ನೇಣಲಿಕ್ಕಲೊ ಮಡುವ | ಹಾಯ್ವೆನೊ ಮತ್ತೆ |
ತಾನುಂಡಪೆನೊ ವಿಷವ ||
ಪ್ರಾಣಾರ್ಪಣವಗೈದರೇ | ಶಿಶುಹತ್ಯೆಯ |
ಸೂನ ತಪ್ಪದು ದೇವರೇ || 99 ||

**ಭಾಮಿನಿ**

ಇಂತು ಚಿಂತಾಕ್ರಾಂತಳಾಗಿ ಪು |
ರಾಂತಕನೆ ಕೈಗಾಯ್ವುದೆನುತಾ |
ಕಾಂತೆ ಗೋಳಾಡುತ್ತಲಿರಲಾ ಶುಭಮುಹೂರ್ತದಲಿ ||
ಕಂತುಹರನೊಲವಾಗಲಾ ಮತಿ |
ವಂತೆಯುದರಾಂತರದೊಳುದಿಸಿದ |
ನಂತಗುಣಮಣಿ ಬಾಲಕನು ಬಾಲಾರ್ಕನಂದದಲಿ || 100 ||

**ಕೇದಾರಗೌಳ - ಅಷ್ಟ**

ಏನೆಂಬೆನುದಯ ವಿ | ಭಾನುವಂತಿಹ ಶಿಶು |
ವಾನನದಾ ಪ್ರಭೆಯ ||
ಕಾಣುತಲೆತ್ತಿ ಕೊಂ | ಡಾನಂದಭಾಷ್ಪದಿ |
ತಾನೆ ಮೈಮರೆತಳಾಗ || 101 ||
ಹರನೆ ಶಂಕರ ಮಹೇ | ಶ್ವರನಿಚ್ಛೆ ಯಾವುದೆ |
ಮ್ಮರಸುಪಟ್ಟವನೇರುವ ||
ತರಳಗೀ ವಿಧಿಯೆ ದು | ರ್ಧರ ಕಾನನದಿ ಹೆತ್ತು |
ಪೊರೆಯಲೆಂತುಟೊ ತಿಳಿಯೆ || 102 ||
ಎನುತ ಮನದಿ ನೊಂದಾ | ತನುವ ಮುದ್ದಾಡುತ |
ತನಯಗೆ ಮೊಲೆಯೂಡುತ ||
ಮನದಾಸರವ ನೀಗು | ವನಕ ದಾಹದ ಬೇಗೆ |
ಯನು ಸೈಸದಾಯ್ತಾಕೆಗೆ || 103 ||
ಎಲ್ಲಿತ್ತೊ ನೀರ್ನೆರ | ಳೆಲ್ಲಿತ್ತೊ ಹೊಳೆ ಹಳ್ಳ |
ವೆಲ್ಲಿತ್ತೊ ಕೊಳನೆನುತ ||
ಪಿಳ್ಳೆಯ ಮರದಡಿ | ಯಲ್ಲೊರಗಿಸಿ ಮೆಲ್ಲ |
ಮೆಲ್ಲನೈದಿದಳೆತ್ತಲು || 104 ||

ತೋರಿತೊಂದೆಡೆ ನಡು | ದಾರಿಯೊಳ್ ಕಾಸಾರ |
ವಾರಿಯನೀಂಟಲಾಗಿ ||
ಘೋರನಿಳಿಯೆ ಕಾಲು | ಜಾರಿದೊಡನೆ ಮೇ |
ಲೇರದಾಯ್ತೇವೇಳ್ವನು || 105 ||
ವಿಧಿಬರಹವ ಮೀರ | ಲೆದೆಯುಂಟೆ ಗ್ರಾಹವೊಂ |
ದಧಿಕ ಪೂರ್ವದ್ವೇಷದಿ ||
ವಧಿಸಲು ಪಿಡಿದೊಯ್ಯ | ಲೊದರಿದಳ್ ಖಗ ಮೃಗೌ |
ಷಧಿಗಳೆ ಮರುಗುವಂತೆ || 106 ||
ಅಯ್ಯೊ ನಾನಿನ್ನೇನ | ಗಯ್ಯಲಯ್ಯಯ್ಯೊ ಹಾ |
ಸಾಯ್ವುದೇ ನಿಶ್ಚಯವು ||
ಅಯ್ಯೊ ಹಾ ಶಿವನೆ ಕಂ | ದಯ್ಯನ ಕಾಯ್ವರಾ |
ರಯ್ಯ ಎಂದೊರಲಿದಳು || 107 ||
ಸವತಿ ಮತ್ಸರದಿಂದು | ದ್ಭವಿಸಿದ ಗ್ರಾಹವಾ |
ಯುವತಿಯ ನುಂಗಲಿತ್ತ ||
ವಿವರಿಸಲೇನ್ನೃಹಾ | ರವದಿಂದಲಳುತಿರ್ದ |
ನವನೀಶ ಸುಕುಮಾರನು || 108 ||

**ಕಂದ ಪದ್ಯ**
ಋಷಿಗಳೆ ಲಾಲಿಪುದಾ ಪಾ |
ಲ್ವಸುಳೆಯು ಗೋಳಾಡುತಿರ್ಪ ಮಾರ್ಗಾಂತರಕಾ ||
ಯಸದಿಂ ನಡೆತಂದೀಕ್ಷಿಸು |
ತುಸುರಿದಳಿಂತೆಂದು ಭೂಸುರಾಂಗನೆಯೋರ್ವಳ್ || 109 ||

**ಸಾರಂಗ - ಅಷ್ಟ**
ಹರನೆ ಏನಿದು ಚೋದ್ಯವು | ಸರ್ವಾಂಗ ಸುಂ |
ದರವಾದ ಹಸುಶಿಶುವು ||
ಪರಿಪರಿ ಮೃಗಗಳು | ಚರಿಸುವ ವನದೊಳ |
ಗಿರಲೇನು ಕಣ್ಬಗೆಗೊಳಿಪ ನೋಟವಿದ್ಯೆಸೆ || 110 ||
ಹೆತ್ತವಳಾರೊ ನೋಡೆ | ನಿರ್ಜನಸ್ಥಳ |
ಸುತ್ತಮುತ್ತಿಹುದು ಕಾಡೇ ||
ಹೆತ್ತವರಿರಲು ಬಿ | ಟ್ಟತ್ತಪೋಪರೆ ಹೆತ್ತು |
ಮಿತ್ತುವಾಹರೆ ದೈವೀ | ವೃತ್ತಿಯಿದಲ್ಲವೆ || 111 ||
ಕೊಂಡೊಯ್ದು ಪೊರೆದಪೆನೊ | ಎಂದರೆ ಶಂಕೆ |
ಗೊಂಡಪುದೆಸಗಲೇನೊ ||
ಕೊಂಡೊಯ್ಯದಿರೆ ಪಾಪ ಬಿಟ್ಟರೆ ಪರಿತಾಪ |
ಉಂಡಪವೈ ವನ್ಯ ದುಷ್ಟಜಂತುಗಳಿಲ್ಲಿ ||112 ||
ಜಾತಿ ಯಾವುದೊ ಬಾಲನ | ವಿಪ್ರನೊ ಕ್ಷತ್ರ |
ಜಾತನೊ ಶೂದ್ರನೇನಾ ||
ನೀತಿಬಾಹಿರ ಕುಲಜಾತನಾದರೆ ಧರ್ಮ |
ಘಾತವಾಯ್ತಿವನ ಸಂಪ್ರೀತಿಯೊಳೊಯ್ದರೆ || 113 ||
ಎನುತ ನಾನಾ ವಿಧದಿ | ವಿಪ್ರಾಂಗನೆ |
ಮನಮರುಗುವ ವೇಳ್ಯದಿ ||
ಮನುಮಥಾಂತಕನು ಭೂಸುರ ರೂಪದಲಿ ಬಂದು |
ವಿನಯದೊಳಾ ಉಮೆಯೊಡನೆಂದನೀತೆರ || 114 ||

**ವಾರ್ಧಕ**
ಮಾನವಂತೆಯೆ ಚಿಂತಿಸದಿರೀತನಭಿಜಾತ |
ಹೀನನಲ್ಲೌ ಪಾರ್ಥಿವಾತ್ಮಜಂ ದುರ್ದೆಶೆಯೊ |
ಳೀ ನಿರ್ಜನ ಸ್ಥಳದೊಳಿರಲಾಯ್ತು ಸುಚರಿತ್ರನಪ್ಪನೌ ಭವಿತವ್ಯದಿ ||
ಸಾನುರಾಗದೊಳಾತ್ಮಭವನೆಂದು ಬಗೆದು ಸು |
ಮ್ಮಾನದಿಂದೊಯ್ದು ನಿಜತನುಜನಿಂದೊಡಗೂಡಿ |
ಸಾನಂದದಿಂ ಕಾಯ್ದುಕೊಳ್ಳೆಂದು ಪೇಳ್ದು ಪಿಂತಿರುಗಿದಂ ಪಾರ್ವನಾಗ || 115 ||

**ಕಾಂಬೋಧಿ - ಅಷ್ಟ**
ಭೂಸುರನಿಂತೆನಲುಮೆಯತಿ ಮುದದಿ |
ಕೂಸನೆರಡು ಕೈಗಳಿಂದೆತ್ತಿ ಭರದಿ ||
ಲೇಸು ಮಹೇಶನ ಮಹಿಮೆಯಿದೆನುತ |
ತೋಷದಿಂದೊಯ್ದಳು ಮುದ್ದಾಡಿಕೊಳುತ || 116 ||
ನಡೆತಂದು ನಿಳಯದಿ ಜಾತಕರ್ಮವನು |
ನಡೆಯಿಸಿದಳು ಮತ್ತೆ ನಾಮಕರಣವನು ||
ಪಡೆದಾತ್ಮಜಗೆ ಶುಚಿವ್ರತನೆಂದು ಮತ್ತಾ |
ಒಡಗೂಡಿದಗೆ ಧರ್ಮಗುಪ್ತನೆಂದೆನುತ || 117 ||
ಎರಡು ಮಕ್ಕಳನಿಕ್ಕೆಲದೊಳೆತ್ತಿಕೊಂಡು |
ತಿರಿತಂದು ಪೊರೆದಳು ಹೊಂಪುಳಿಗೊಂಡು ||
ವರುಷವೆಂಟಾಗಲು ವಿಪ್ರರ ಮುಖದಿ |
ನೆರವೇರಿಸಿದಳುಪನಯನವುತ್ಸಹದಿ || 118 ||
ಕೊಡಿಸಿದಳ್ ಬ್ರಹ್ಮೋಪದೇಶವ ಮತ್ತಾ |
ಬಿಡದೆ ವೇದಾದಿ ಶಾಸ್ತ್ರವನೋದಿಸುತ್ತ ||
ನಡೆ ನುಡಿ ತಪ್ಪದಂತುಭಯ ಬಾಲರನು |
ಕಡುನಲ್ಮೆಯಿಂದೋತು ಪೊರೆದಳಿನ್ನೇನು || 119 ||

**ಭಾಮಿನಿ**
ಈ ತೆರದೊಳುಮೆಯಣುಗರನು ಸಂ |
ಪ್ರೀತಿಯಿಂ ರಕ್ಷಿಸುತಲೊಂದಿನ |
ಜಾತರಿಂದೊಡಗೂಡಿ ಭಿಕ್ಷಾಪೇಕ್ಷೆಯಿಂ ಪೊರಟು ||
ಭೂತಳದಿ ಸುಳಿದಾಡುತಾ ಮುನಿ |
ನಾಥ ಶಾಂಡಿಲ್ಯಾಶ್ರಮದ ಮಹಿ |
ಮಾತಿಶಯವ ನಿರೀಕ್ಷಿಸುತ ನಡೆತಂದಳಾಸ್ಥಳಕೆ || 120 ||

**ಸಾಂಗತ್ಯ - ರೂಪಕ**
ವರ ಮುನೀಶ್ವರನಾಗ | ಪರಮ ತತ್ವಾರ್ಥವ |
ನರುಹುತ್ತಲಿರೆ ಶಿಷ್ಯರಿಂಗೆ ||
ಪರಿಕಿಸಿ ಭಯಭಕ್ತಿ | ಭರದಿಂದಲಾ ಮೂವ |
ರೆರಗಿದರಾ ಮುನಿಯಡಿಗೆ || 121 ||
ಮನಿವರ್ಯನೆಂದನೊ | ಮ್ಮನದಿಂದ ಹರಸುತ್ತ |
ಅಣುಗರೊಳೀತನಾರ್ ನಿನ್ನ ||
ತನುಜನಹುದೆ ಸತ್ಯ | ವನು ಬಲ್ಲೆಯಾದರೆ |
ಅನುಮಾನಿಸದೆ ಪೇಳ್ವುದೆನುತ || 122 ||
ಚಿತ್ತವಿಸೈ ಮುನಿ | ಪೋತ್ತಮನಿವನ ಮೈ |
ಹೆತ್ತವರಾರೊ ನಾನರಿಯೆ ||
ಎತ್ತಿತಂದೆನು ಕಾಡೊ | ಳತ್ತು ಬಾಯ್ಬಿಡುತಿರೆ |
ಬತ್ತಲೆ ಶಿಶುವಾಗಿರಲ್ಕೆ || 123 ||

ಕಾಲಜ್ಞನಹ ಮುನಿ | ಪಾಲನೀತನ ಕುಲ |
ಶೀಲವೆಲ್ಲವ ವಿಸ್ತರಿಸುತ ||
ಪಾಲಿಸೆನುತ ಪಾದ | ಧೂಳಿಯಾಂತೆರಗಲು |
ಶೀಲವಂತೆಯೊಳೆಂದ ಋಷಿಯು || 124 ||

**ಕಲ್ಯಾಣಿ - ಅಷ್ಟ (ಯಾಕಿನಿತುಸುರುವಿರಿ)**
ಕೇಳಮ್ಮ ಗುಣಶೀಲೆಯೆ | ಬಾಲನ ಕಥೆ |
ಪೇಳುವೆನೌ ಸಾಧ್ವಿಯೆ ||
ಕೇಳಿದೆಯ ವಿದರ್ಭರಾಯನ |
ಶೀಲಚರಿತೆಯ ಸತ್ಯರಥನಾ |
ಸಾಲ್ವನಿಂ ಹತನಾಗೆ ತಬ್ಬಲಿ |
ಬಾಲನಾದನದೇನು ಚೋದ್ಯವೊ || 125 ||
ಪತಿಯು ತಾನಳಿದ ಹೊತ್ತು | ವನಾಂತರ |
ಗತಳಾದ ಮೇಲೆ ಹೆತ್ತು ||
ಸತಿಯು ದಾಹದೊಳಿಳಿಯೆ ಸರಸಿಯ |
ಹತಿಸಿತೆಲೆ ನೆಗಳೊಂದು ದ್ವೇಷದ |
ವ್ಯತಿಕರದೊಳಾ ನಿನ್ನ ದೃಷ್ಟಿಯ |
ಪಥಕೆ ಗೋಚರನಾದನೀತನು || 126 ||
ಮೊದಲು ಪಾಂಡ್ಯಾಧೀಶನು | ಪ್ರದೋಷವ್ರ |
ತದಿ ಮಗ್ನನಾಗಿರ್ದನು ||
ಮುದದೊಳೊಂದಿನ ಪೂಜೆಯಿಂದಿರೆ |
ಕದನಕೈದಿದ ಶತ್ರುಸೇನೆಯ |
ಸದೆದು ಬಂದುಳಿದಾ ಪ್ರಸಾದವ |
ಮದಮುಖತ್ವದೊಳಳಿದನಾತನು ||127 ||
ಪೂಜಾಫಲವನೊಲ್ಲದೆ | ಭೋಜನಗೈದ |
ವ್ಯಾಜದಿಂದತಿ ಭಂಗದೆ ||
ಮಾಜಲಾಯ್ತಿನ್ನೇನು ಬಾಲಕ |
ರೋಜೆಯಿಂ ಪಕ್ಷಪ್ರದೋಷವ |
ಸಾಜದಿಂದಾಚರಿಸಲತಿ ಶುಭ |
ಯೋಜಿಸುವುದಿಷ್ಟಾರ್ಥ ಸಿದ್ಧಿಯು || 128 ||
ಒಡನೆ ಬಾಲಕರಿರ್ವರ | ಕರೆದು ತನ್ನ |
ತೊಡೆಯನೇರಿಸುತವರ ||
ತಡವರಿಸಿ ಮಂತ್ರೋಪದೇಶವ |
ಕಡುಮಮತೆಯಿಂದಿತ್ತು ಪೂಜೆಯ |
ಬಿಡದೆ ಪಕ್ಷಪ್ರದೋಷವ್ರತವನು |
ನಡೆಸಿರೈ ನೀವೆನುತ ಹರಸಿದ || 129 ||

**ಖಮಾಚ್ - ರೂಪಕ (ಸಾಕು ಸಾಕು ಬೇಡ ಛಲಪದ)**
ಎನಲಿಂತೆಂದಳುಮೆಯು ನಮಿಸುತ | ರೋಮಾಂಚನಗೊಂಡು |
ಮನದಿ ಧನ್ಯಳಾದೆನೆನ್ನುತ ||
ಮುನಿವರೇಣ್ಯರಮೃತ ವಚನ |
ದನುಭವದಿ ಪುನೀತಳಾದೆ |
ನಣುಗನಿವನ ಚರಿತೆಯರಿದು |
ದನುಮಾನಿಸುತಲಿರ್ದೆನಯ್ಯ || 130 ||

ಹಿಂದೆ ಗೆಯ್ದ ಕರ್ಮವಶದಲಿ | ನಿರ್ಗತಿಕನಾದ |
ರಿಂದು ನಿಮ್ಮ ಮಂತ್ರ ಬಲದಲಿ ||
ಹೊಂದಿತಾನಂದವೈಸೆ |
ಚಂದದಿಂ ಪ್ರದೋಷವ್ರತಗ |
ಳಿಂದಲಿಷ್ಟ ಪೂರ್ತಿಯಾಗಿ |
ಮುಂದೆ ಬಾಳಲಾಯ್ತು ಸುಖದಿ || 131 ||
ಮರೆಯಲುಂಟೆ ತವ ಸುನಾಮವ | ಶ್ರೇಯೋಭಿವೃದ್ಧಿ |
ಗಿರುವ ಮಂತ್ರವಿತ್ತ ಪಾದವ ||
ಕರುಣಿಸುವುದಪ್ಪಣೆಯನೆಂದು |
ವರ ಯತೀಂದ್ರರಂಘ್ರಿಗೆರಗಿ |
ತೆರಳಿದಳು ಬಾಲಕರ ಕೂಡಿ |
ಧರಣೀಸುರನ ಸತಿಯಲ್ಲಿಂದ || 132 ||

**ವಾರ್ಧಕ**
ಮತ್ತೆ ಬಾಲಕರಿರ್ವರೊಂದಾಗಿ ಮಾತೆಗೆರ |
ಗುತ್ತ ಮುನಿಯುಪದೇಶದಂತೆ ಪ್ರತಿಪಕ್ಷದೊಳ್ |
ಪತ್ರಪುಷ್ಪಂಗಳಂ ತಿರಿತಂದು ಸುಪ್ರದೋಷ ವ್ರತಮನಾಚರಿಸುತ ||
ಭಕ್ತಿಯೊಳ್ ಶಿವಮಂತ್ರಮಂ ಬಿಡದೆ ಜಪಿಸುತ್ತ |
ಲರ್ತಿಯಿಂದಾರಾಧನಂ ಗೆಯ್ದು ಪರಶಿವನ |
ಪ್ರತ್ಯಕ್ಷಮಾಗಿಸುತಲಿಷ್ಟಾರ್ಥ ಸಿದ್ಧಿಯಂ ಪಡೆದು ಸುಖಮಿರುತಿರ್ದರು || 133 ||

**ಕಾಂಬೋಧಿ - ಝಂಪೆ**
ಇತ್ತಲವರೀತೆರದಿ | ಮೃತ್ಯುಹರನೊಲವಿನಲಿ |
ಚಿತ್ತಶಾಂತಿಯೊಳಿರಲಿಕತ್ತ ||
ಧೂರ್ತ ಸಾಲ್ವಾಖ್ಯ ತಾ | ನಿತ್ತನೋಲಗವ ಸುಭ |
ಟೋತ್ತಮರ ಕೂಡಿ ಸಂಭ್ರಮದಿ || 134 ||
ಅಷ್ಟರೊಳಗಿಳಿತಂದ | ನಷ್ಟಮೂರ್ತಿಯ ನೆನೆದು |
ದುಷ್ಟನಿದ್ದೆಡೆಗೆ ನಾರದನು ||
ದೃಷ್ಟಿಸುತ ಸಾಲ್ವನಿದಿ | ರ್ಗೊಟ್ಟು ಕರೆತಂದು ನಿಜ |
ಪಟ್ಟವಣೆಯೇರಿಸುತಲೆಂದ || 135 ||
ಏನಿದಚ್ಚರಿಯಮರ | ಮೌನಿವರ್ಯರೆ ಬಂದಿ |
ರೇನು ಕಾರಣ ಕಾರ್ಯವೇನು ||
ಏನಿದ್ದರರುಹಬೇಕಾನು ಕೇಳ್ವೆಪೆಯೆನ್ನ |
ಸ್ಥಾನಮಾನಕೆ ಹಾನಿಬಂತೆ || 136 ||
ವ್ಯರ್ಥವಾಯ್ತೈ ನಿನ್ನ | ಸತ್ವ ಸಾಹಸ ಕೃತ್ಯ |
ಸತ್ಯರಥನಳಿದ ಮೇಲವನ ||
ಪತ್ನಿಯುದರದೊಳೊರ್ವ | ಪುತ್ರನುದಿಸುತಲೀಗ |
ಮೃತ್ಯುರೂಪದಿ ಬೆಳೆಯುತಿಹನು || 137 ||
ಹೆತ್ತವರದಾರಿಲ್ಲ | ದತ್ತು ಕೊಳುತಿರೆ ಪಾರ್ವ |
ಳೆತ್ತಿ ಸಾಕಿದಳಸ್ತ್ರಬಲದಿ ||
ಶಕ್ತನಾಗಿಹನೇಕ | ಚಕ್ರದಲಿ ಶಾಂಡಿಲ್ಯ |
ರಿತ್ತ ಮಂತ್ರೋಪದೇಶದಲಿ || 138 ||
ಕೇಳಿದಾಗಲೆ ಪ್ರಳಯ | ಕಾಲನೆನಲಾರ್ಭಟಿಸಿ |
ಬೀಳುಗೊಟ್ಟಾ ಮುನೀಶ್ವರನ ||
ಬಾಲಹತ್ಯೆಯಲಿ ಸುಖಬಾಳ್ವುದೆಂದೆಣಿಸಿ ಬರ |
ಹೇಳಿದನು ನಿಜಸಹೋದರಿಯ || 139 ||

**ಭೈರವಿ - ಏಕ**
ಬಾರೆಲೆ ಕುಂಭಸ್ತನಿಯೆ | ಮುನಿ |
ಸಾರಿದುದೇನೆಂದರಿಯೆ ||
ವೈರಿಯ ಸುತನೋರ್ವಾತ | ಹ |
ಮ್ಮೈರಿ ಧುರಕೆ ಬಹನಿತ್ತ || 140 ||
ಸತ್ಯರಥಾತ್ಮಜನಂತೆ | ಧರ್ಮ |
ಗುಪ್ತನೆನುವ ಪೆಸರಂತೆ ||
ಮೃತ್ಯುಹರನ ಪೂಜಿಸುತ | ಶ್ರುತಿ |
ಶಾಸ್ತ್ರದಿ ಪಳಗಿಹನಾತ || 141 ||
ಏಕಚಕ್ರಕೇ ನಡೆದು | ವಿವಿ |
ಧಾಕಾರದಿ ಹಿಡಿದೆಳೆದು ||
ಜೋಕೆಯೊಳೊಪ್ಪಿಪುದೆನಗೆ |ಮು |
ನ್ನೂಕುವೆ ಮಾರಿಯ ಬಾಯ್ಗೆ || 142 ||
ಎನಲಸುರೆಯು ಮೈದೆರೆದು | ಸಾ |
ಲ್ವನೊಳಾಣತಿಯನು ಪಡೆದು ||
ಅಣುಗನ ಹಿಡಿತಹೆನೆನುತ | ಘೋಂ |
ಕನೆ ಹಾಯ್ದಳು ಬೊಬ್ಬಿಡುತ || 143 ||
ಇತ್ತಲಣುಗರೊಡಗೂಡಿ | ವನ |
ಸುತ್ತುತ ಶಿವನಡಿ ಬೇಡಿ ||
ಪತ್ರಪ್ರಸೂನಾದಿಗಳ | ಕೈ |
ಗೆತ್ತುತಲಿರ್ದರು ಬಹಳ || 144 ||

**ಕಂದ ಪದ್ಯ**
ದೂರದಿ ಕಂಡಾ ದನುಜೆಯು |
ಮಾರನ ರೂಪಾಂತು ಮೆರೆವ ಬಾಲರ ಮುಖಮಂ ||
ಘೋರಾಕಾರವ ಮರೆಸುತ |
ಭೋರನೆ ತಳೆದಳ್ ಮನೋಜನಾ ರತಿಯಂದಂ || 145 ||

**ಮಧ್ಯಮಾವತಿ - ತ್ರಿವುಡೆ**
ದುರುಳೆಯಾಗಳೆ ದರ್ಪಣದಿ ಮುಖ |
ಸಿರಿಯ ನೋಡುತ ತಿಲಕ ತಿದ್ದುತ |
ಕುರುಳ ಸರಿಗೊಳಿಸುತ್ತ ಸಿರಿಮುಡಿ |
ಗಿರಿಸಿದಳು ಪೂಮಾಲೆಯ | ಚೆಂದದಿಂದ || 146 ||
ಜರಿಯ ಸೀರೆಯನುಟ್ಟು ವಿವಿಧಾ |
ಭರಣಗಳ ತಾ ತೊಟ್ಟು ಕಂಕಣ |
ಚರಣದಂದುಗೆ ಗೆಜ್ಜೆ ಗಿಲಿರೆನೆ |
ಸ್ಮರನ ಮದಮದ್ದಾನೆಯೋಲ್ ನಡೆ | ತಂದಳೊಲಿದು || 147 ||
ಕಣುಮನವ ಸೆಳೆದುಣ್ಮುವಾ ಚೆಲು |
ಕಣು ಸೆರೆಯೊಳೀಕ್ಷಿಸುತ ಕುಂಭ |
ಸ್ತನವವನಪ್ಪುತ ನೆಲನ ಗೀಚುತ |
ವಿನಯದಿಂ ನೃಪಸುತನೊಳು | ನುಡಿದಳಿಂತು || 148 ||
ಇತ್ತ ಬಾರೆಲೆ ತರುಣ ಪ್ರಾಯದ |
ಚಿತ್ತಜನೆ ನಿನ್ನೊಡನೆ ಮಾತೊಂ |
ದಿತ್ತಲಿಹೆ ನೋಡಿತ್ತ ಹರುಷಿತ |
ಚಿತ್ತದಲಿ ಮಧುರೋಕ್ತಿಯ | ನಾಡಬಾರೈ || 149 ||

**ಕಾಪಿ - ಅಷ್ಟ (ಗುರುವರ್ಯ ಕೇಳೆನ್ನ ಮಾತ)**

ನೋಡಿದಾಗಳೆ ಶುಚಿವ್ರತನು | ಪೇಳ್ದ |
ರೂಢಿಪಾತ್ರಜಗೆ ನೀತಿಯನು ||
ಮೋಡಿಯಿದ್ದೈ ಕಾಡೊಳಾಡುವಂಗನೆಯರ |
ನೋಡಲಾಗದು ನಾವು ಕೇಡಾಗಲಿದೆ ಮುಂದೆ || 150 ||
ಇನಿತು ಮಾತಾಡುತ್ತಲಿರಲು | ಬಲು |
ಸನಿಹಕ್ಕೈತಂದು ಪೇಳಿದಳು ||
ಅಣುಗರೆ ನಿಮ್ಮ ಮುದ್ದಿನ ಮೊಗಸಿರಿ ನೋಡಿ |
ಕನಿಕರಗೊಂಡು ಕೇಳ್ವೆನಕ ಭೀತಿಯದೇಕೆ || 151 ||
ಯಾರಯ್ಯ ನಿಮ್ಮ ಪೆತ್ತವರು | ಕಾಯ್ವ |
ರಾರಿಲ್ಲಿ ನಿಮ್ಮದಾವೂರು ||
ದಾರಿದ್ರ್ಯ ಹೇರಿ ನೀವೀರ್ವರು ಬನದಲ್ಲಿ |
ಸೇರಿ ಹೂಗಳನಾಯ್ದು ಸಾರುವುದೆಲ್ಲಿಗೆ || 152 ||
ಅಮ್ಮ ಕಾಡಾಡಿಗಳಹೆವು | ನಿತ್ಯ |
ಬೊಮ್ಮಚರ್ಯದಿ ಮೈವೆತ್ತಿಹೆವು ||
ನಮ್ಮನು ಶುಚಿವ್ರತ ಧರ್ಮಗುಪ್ತರು ಎಂದು |
ಅಮ್ಮ ಕರೆಯುತಿರ್ಪಳೊಮ್ಮಾತು ಬೇಡೀಗ || 153 ||

**ಶಂಕರಾಭರಣ - ಏಕ**

ಚಿಕ್ಕವರು ನೀವೇತಕಿಲ್ಲಿ |
ದುಕ್ಕಪಡುವಿರೇಕೆ ಬನ್ನಿ |
ಅಕ್ಕರೆಯಲಿ ಪೊರೆವೆ ಮನೆಯ | ಮಕ್ಕಳೊಂದಿಗೆ || 154 ||
ಠಕ್ಕು ಮಾತು ಬೇಡ ಶಿವನ |
ರಕ್ಷೆಯಿರಲು ದುಕ್ಕವುಂಟೆ |
ತಕ್ಕ ಪುಷ್ಪಗಳನರ್ಚಿಸುತ | ಸೌಖ್ಯವಿರ್ಪೆವು || 155 ||
ಬಾಲರಿರ ನಿಮ್ಮಲ್ಪ ಬುದ್ಧಿ |
ಕಾಲಕೆಳಗೆಂಬುಕ್ತಿ ದಿಟವು |
ಮೇಲನರಿತು ಬನ್ನಿರೆನ್ನ | ತೋಳನಪ್ಪುತ || 156 ||
ಪೇಳಲೇತಕಿಂತ ಮಾತ |
ಕೇಳಲಮ್ಮ ಕೋಪಿಸುವಳು |
ಶೂಲಿಯಡಿಯ ಮರೆತರುಂಟೆ | ಮೇಲಣಾಶೆಯು || 157 ||
ದರ್ಪವೇಕೆ ಬಾರದಿರ್ದ |
ರಪ್ಪಿ ಕೊಂಡೊಯ್ವೆನೀಗ |
ದರ್ಪಕಾರಿ ಬರಲು ಬಿಡಿಸ | ಲಾರ್ಪನೇ ಭಲಾ || 158 ||
ತಪ್ಪಿನುಡಿದು ಸಾಯಬೇಡ |
ತೆಪ್ಪನೈದಿ ಮನೆಯ ಸೇರು |
ಕಪ್ಪುಗೊರಳನನ್ನು ಹಳಿಯ | ದಿರ್ಪುದುಚಿತವು || 159 ||
ಬಣಗುಗಳೆ ನೀವೆನ್ನ ಬಲವ |
ನಣಕಿಸುವಿರೆ ಲೇಸು ನಿಮ್ಮ |
ತನುವ ಕಾಯ್ವರಾರೊ ನೋಳ್ಪೆ | ನೆನುತಾರ್ಭಟಿಸುತ || 160 ||
ಕನಲ್ದು ಘೋರಾಕೃತಿಯನಾಂತು |
ಘನಮಹಾಮೃತ್ಯುವೆನಲು |
ಅಣುಗರಿದಿರು ನಿಂದಳು | ಲ್ಬಣ ವಿಕಾರದಿ || 161 ||

**ಭಾಮಿನಿ**
ಕಂಡರಣುಗರು ವಿಕೃತ ವಕ್ತ್ರದ |
ಕೆಂಡಕಾರುವ ಲೋಚನದ ಮಸಿ |
ಯುಂಡ ದೇಹದ ಕೋರೆದಾಡೆಯ ನೀಳ್ದ ಬಲ್ಮೊಲೆಯ ||
ಚಂಡಿಕೆಯ ಪ್ರತಿ ಮೃತ್ಯುವಿನ ಮೈ |
ಗೊಂಡು ರೌದ್ರಾವೇಶದಲಿ ದೋ |
ರ್ದಂಡವನು ತೂಗುತ್ತ ಹೂಂಕೃತಿಗೈವ ರಾಕ್ಷಸಿಯ || 162 ||

**ಸೌರಾಷ್ಟ್ರ - ತ್ರಿವುಡೆ**
ರಕ್ಕಸಿಯ ಘನಘೋರ ರೂಪವ |
ನೀಕ್ಷಿಸುತ ಬಾಲಕರು ಭಯದಲಿ
ರಕ್ಷಿಸೈ ಶಿವನೆಂದು ಮರುಗಿದ | ರಾಕ್ಷಣದಲಿ || 163 ||
ಹರನೆ ಗಂಗಾಧರನೆ ಪರಮೇ |
ಶ್ವರನೆ ರಕ್ಷಿಸು ಬಾಲಕರ ಭಯ |
ಹರಿಸುತಸುರೆಯನಿರಿದು ಲೋಕವ | ಪೊರೆವುದೆನುತ || 164 ||
ಹರನು ತತ್ ಕ್ಷಣವರಿತು ಗಿರಿಜೆಯೊ |
ಳೊರೆದನಾ ಭೈರವಿಯ ರೂಪವ |
ಧರಿಸುತಸುರೆಯ ತರಿದು ಬಾಲರ | ಪೊರೆವುದೆನುತ || 165 ||
ಎನೆ ಹಸಾದವೆನುತ್ತ ಭದ್ರಾ |
ಸನವಿಳಿದು ಭೈರವಿಯ ರೂಪದಿ |
ದನುಜೆಯೆಡೆಗಯ್ತಂದಳಾ ಗಿರಿ | ತನುಜೆಯಾಗ || 166 ||
ಎಲವೊ ರಾಕ್ಷಸಿ ನಿರ್ಗತಿಕರೆಂ |
ದಳಿಸಬಗೆದೈ ಮಕ್ಕಳನು ತಡೆ |
ಗಳಿಲನೆದೆಯನು ಸೀಳ್ವೆನು ತೋರ್ | ಬಲುಹನೀಗ || 167 ||
ಯಾರು ನೀಂ ರಣಮಾರಿಯೊ ಬಲು |
ಭೈರವಿಯೊ ಮೃತ್ಯುವಿನ ಮೂರ್ತಿಯೊ |
ತೋರಲಿರ್ದಪೆನೆಲೆಗೆ ತೋಳ್ಬಲ | ಜಾರಲುಂಟೇ || 168 ||
ಎಂದು ನೊಂದೆಕ್ಕಲನ ಗರ್ಜನೆ |
ಯಿಂದ ಮುಂದಡಹಾಯ್ದು ಬರುತಿರ |
ಲೊಂದು ಮುಷ್ಟಿಯೊಳೆರಗಿದಳು ಭರ | ದಿಂದಲಗಜೆ || 169 ||

**ಭಾಮಿನಿ**
ಒಡೆದುದೋ ಬ್ರಹ್ಮಾಂಡ ಭಾಂಡವು |
ಕೆಡೆದುದೋ ಭೂತಳಕೆ ನಭವೆನೆ |
ಕೆಡೆದು ಬಿದ್ದುರುಳಲ್ಕೆ ನೀಲಾಚಲದವೋಲಸುರೆ ||
ಒಡನೆ ಸೌಮ್ಯಾಕೃತಿಯೊಳಂಬಿಕೆ |
ಹುಡುಗರನು ಮೈದಡವಿ ಹಿಂದಕೆ |
ನಡೆದಳೇನೆಂದಪುದೊ ಪರಶಿವನಾ ಮಹಾತ್ಮೆಯನು || 170 ||

**ಕೇದಾರಗೌಳ - ಅಷ್ಟ**
ಯತಿಗಳೆ ಕೇಳಿರೊ | ಮೃತದಿ ಪೇಳ್ವೆನಂಶು |
ಮತಿಯೊಂದುದಿನ ತನ್ನಯ ||
ಪಿತನೆಡೆಗೈತಂದ | ಳತಿ ವಿನಯದಿ ಮನೋ |
ವ್ಯಥೆಯ ಸೈರಿಸಲಾರದೆ || 171 ||
ಗಂಧರ್ವಪತಿ ದ್ರುಮಿ | ಳೇಂದ್ರನು ತನುಜೆಯ |
ಕುಂದಿದಾನನವ ನೋಡಿ ||
ನೊಂದೆಯೇಕೆಲೆ ಮುದ್ದು | ಬಂದ ಚಿಂತೆಯ ಪೇಳ್ವ |
ದೆಂದು ತಕ್ಕೈಸುತೆಂದ || 172 ||

ಅರಿಯದೇನೈ ನವ | ತರುಣಿಯರನುಭಾವ |
ಹರಯಕೆ ಬಂದ ಮೇಲೆ ||
ವರನಿಲ್ಲದೊಡೆ ದೇಹ | ಕೊರಗದಿರ್ಪುದೆ ಮರ |
ನಿರದ ಲತಾಂಗದಂತೆ || 173 ||
ವಿಧಿಯ ನೇಮವ ಮೀರು | ವಧಟರಾರೌ ವ್ಯರ್ಥ |
ವೆದೆಗುಂದಲೇಂ ಫಲವು ||
ಸದನದೊಳಿರು ಶುಭಾ | ಸ್ಪದದಿ ಮಾಳ್ಪೆನು ಲಗ್ನ |
ಮದನಾರಿಯೊಲವಿನಲಿ || 174 ||
ಪುರುಷ ಯತ್ನಗಳಿಲ್ಲ | ದಿರೆ ಫಲ ಬರ್ಪುದೆ |
ಬರಿದೆ ಮಾಡದು ದೈವವು ||
ಹಿರಿಯರ ಸುಕೃತದಿಂ | ಕಿರಿಯರೇಳಿಗೆಯೆಂಬು |
ದರಿತವರ್ಗೇನುವುದೇನು || 175 ||

**ಭಾಮಿನಿ**

ತರಳೆ ನಡೆ ಚಿಂತಿಸದಿರೌ ಸಖಿ |
ಯರ ಸಮೇಳದೊಳಂತಪುರದೊಳ |
ಗಿರು ಸುಖದೊಳೆಂದೆನುತ ದ್ರುಮಿಳನು ಕಳುಹುತಾತ್ಮಜೆಯ ||
ಹರನ ಕಾಂಬರ್ಥಿಯೊಳಗಿರಲದ |
ನರಿತು ಸಖಿಯರು ಚೈತ್ರದುತ್ಸವ |
ಭರದಿ ಹಿಗ್ಗುತಲಂಶುಮತಿಯೊಡನೆಂದರೀತೆರದಿ || 176 ||

**ಜಂಜೂಟಿ - ರೂಪಕ (ಆನಂದಮುಖಿ ಸುಂದರಾಂಗಿ)**

ಬಾ ಬಾರೆ ಸುಮತಿಯಂಶುಮತಿ | ವಾರಿಜಾಂಬಕಿ |
ಸಾರಿ ವನವಿಹಾರ ಗೈವ | ಮಾರನಾಸಖಿ || 177 ||
ಏನೆಂಬೆವಾ ವಸಂತೋತ್ಸವದಾ | ರಂಭದುತ್ಸಾಹ |
ಅಂಬುಜಗಳ ಜೇಂಬುಳುಗಳ | ಜಂಭದಾರವ || 178 ||
ನಾನಾ ಪ್ರಸೂನ ನೋಡು ಬಾ ನ | ವೀನ ದೃಶ್ಯವ |
ಮಾನಸದ ದು | ಮ್ಮಾನ ಕಳೆವ | ಗಾನ ಕೇಳುವ || 179 ||
ರಾಕೇಂದುಮುಖಿ | ಆತ್ಮಸಖೀ | ಚೆಂದವಾಯ್ತಲೆ |
ಬೆಂದ ಹೃದಯಕಿಂದು ಮಹಾ | ನಂದವಾಯ್ತಲೆ || 180 ||

**ಕುಸುಮ ಷಟ್ಪದಿ**

ಇಂತೆನುತಲಂಶುಮತಿ |
ಸಂತಸದಿ ಗೆಳತಿಯರ |
ಪಂಕ್ತಿಯೊಡಗೂಡಿ ವನ ವನಗಳಲ್ಲಿ ||
ತಾಂ ತಿರಿದು ಕುಸುಮಗಳ |
ನಾಂತು ತಂಬೆಲರೊಳನು |
ಶಾಂತಿಯಿಂದಿಳಿದಳಾ ಜಲಕೇಳಿಗೆ || 181 ||

**ಸುರುಟಿ - ಏಕ**

ಆಡಿದರಬಲೆಯರು | ಜತೆ ಜತೆ|
ಗೂಡುತ ಮತ್ತವರು ||
ಆಡಿದರಾ ಜಲಕ್ರೀಡೆಯ ಕಣ್ ಬಗೆ |
ಗೂಡುತ ಕುಣಿಕುಣಿದಾಡುತ ಹಾಡುತ || 182 ||
ನಗು ಮೋರೆಯನೆತ್ತಿ | ಸೀರೆಯ |
ನುಗಿದೊಮ್ಮೆಗೆ ಸುತ್ತಿ ||
ನೆಗಹುತ ಕೈ ಕೈ | ಬಿಗಿಯುತ ಮೆಲು ಕುಚ |
ಯುಗಳವನಪ್ಪುತ | ಜಿಗಿಜಿಗಿದಾಡುತ || 183 ||

ಮೊಗ ಮೊಗ ಮುದ್ದಿಡುತ | ಜೀರ್ಕೊಳ |
ವಿಗಳಿಂ ಚಿಮುಕಿಸುತ ||
ಲಗು ಬಿಗು ಜಲ ಗಿಲವುಗುಳುತ ಜಗುಳುತ |
ತೆಗೆ ಬಿಗಿಯೆನುತೂರ್ಮಿಗಳಂ ನೆಗಳುತ || 184 ||

**ಸಾಂಗತ್ಯ - ರೂಪಕ**

ಇಂತು ಜಲಕ್ರೀಡಾ | ಭ್ರಾಂತಿಯಿಂದನಿಬರೋ |
ರಂತಿರಲಾ ವನಾಂತರದಿ ||
ಕಂತುಹರನ ಭಕ್ತಿ | ಯಾಂತು ಸಾಗುತಲಿರ್ದ |
ರಂತಿರ್ವರಣುಗರು ಮುಂದೆ || 185 ||
ತ್ವರಿತದಿ ಶುಚಿವ್ರತ | ತರುಣೀವರ್ಗವ ನೋಡಿ |
ಕರೆದೆಂದನಾ ನೃಪಾತ್ಮಜನಾ ||
ಹರಿಯದಿರತ್ತ ದು | ರ್ಭರ ನೋಟವಿಹುದಲ್ಲಿ |
ಪರವಶನಾಗದಿರೆನುತ || 186 ||
ಯಾವ ನೋಟವೊ ನೋಡ | ಲಾವ ದೋಷವೊ ದೃಷ್ಟಿ |
ದೇವ ಕೊಟ್ಟಿಹನೇಕೆಂದರಿಯೋ ||
ಕೋವಿದನಿರಲು ಸ್ವ | ಭಾವ ಬೇರಹುದೆ ಸ |
ದ್ಭಾವದಿ ನೋಡಿ ಬಹೆನಯ್ಯ || 187 ||
ಬ್ರಹ್ಮಚರ್ಯದೊಳಿರ | ಲಮ್ಮ ಸ್ವೈರಿಪಳೆ ನಾವ್ |
ದುರ್ಮಾರ್ಗದಲಿ ಸಾಗಬಹುದೆ ||
ಬ್ರಹ್ಮ ಕುಲಜನಾಗಿ | ಧರ್ಮ ತಪ್ಪೆನು ನಿನ್ನ |
ಧರ್ಮವೆಂತಿಹುದೊ ನಾನರಿಯೆ || 188 ||
ಬಾರತ್ತ ಹೋಗಿ ನಾ | ಬಾರೆ ನಿನ್ನೊಡನೆ ಮುಂ |
ದೋರುವ ಹೆಮ್ಮರನಡಿಯ ||
ಸೇರಿರ್ಪೆನೆಂದು ಹಿಂ | ಜಾರಲಾ ಶುಚಿವ್ರತ |
ಸಾರಿದನರಮಗನಾಚೆ || 189 ||
ಒಡನೆ ಸ್ತ್ರೀಯರ ಮೊತ್ತ | ವೊಡವೆಯುಡಿಗೆಯಾಂತು |
ನಡೆನೋಡುತಿರೆ ನೃಪಸುತನು ||
ನುಡಿಸಿದನಾ ತಾರಾ | ಗಡಣದೊಳ್ ಶಶಿಯಂತೆ |
ಬೆಡಗಿ ನಿಂದಿರುವಂಶುಮತಿಯ || 190 ||

**ಕಾಪಿ - ಅಷ್ಟ (ಇವಳಾವ ಲೋಕದ ಸತಿಯೋ)**

ತರುಣಿ ನೀನಾರು ಪೇಳಿತ್ತ | ನಿನ್ನ |
ಪರಿಕಿಸಲಾಶ್ಚರ್ಯವಾಯ್ತು ನೋಡಿತ್ತ || ಪ. ||
ಮೋರೆ ನೋಡಲು ಚಂದ್ರನಂತೆ | ನಗು |
ಬೀರುವ ತುಟಿಗಳರುಣಬಿಂಬದಂತೆ |
ತೋರುವಕ್ಷಿಗಳಬ್ಜದಂತೆ | ಪ್ರಭೆ |
ಕಾರುತಿರ್ಪವು ಸರ್ವಾಂಗಗಳು ಓರಂತೆ || 191 ||
ಯಾರು ನೀ ಮಾನವಾಂಗನೆಯೊ | ಮೇ |
ಣಾರು ದೈತ್ಯಾಂಗನೆಯೋ ಸುರಾಂಗನೆಯೋ |
ಮಾರನ ರತಿಪ್ರತಿಕೃತಿಯೋ | ಭವ್ಯಾ |
ಕಾರದೊಳಿಹ ಗಂಧರ್ವಕನ್ನಿಕೆಯೊ || 192 ||
ಎನಲು ನಾಚುತ ಶಿರಬಾಗಿ | ಸಖೀ |
ಜನರ ಹಿಂದಿಕ್ಕಿ ಮನದ ಶಂಕೆ ನೀಗಿ ||
ಮನುಮಥಾಸ್ತ್ರಕೆ ಮನನೊಂದು | ಮೃದು |
ಧ್ವನಿಯೊಳೆಂದಳು ಸರಸದ ಸುಧೆಗರೆದು || 193 ||

**ಕೋರೆ - ಏಕ**

ಚಿತ್ರವಿಸ್ಯೈ ಪು | ಣ್ಯಾತ್ಮನೆ ಗಂಧ |
ರ್ವಾತ್ಮಜೆನಾ ಗಂಧರ್ವರಲಿ ||
ಉತ್ತಮನಹ ದ್ರುಮಿ | ಳಾಖ್ಯನ ಸುತೆ ಪೆಸ |
ರಿತ್ತಿಹನಂಶುಮತಿಯೆನುತ || 194 ||
ಕನ್ನಿಕೆಯೆನ್ನ ಮ | ಹೋನ್ನತಗೊಪ್ಪಿಸ |
ಲೆಣ್ಣಿಸಿಹನು ಪಿತನೊಳ್ಮನದಿ ||
ಮನ್ಮಥನಸ್ತ್ರಕೆ | ಬನ್ನಬಡುತ ಸುಖ |
ವನ್ನರಸುತ ಬಂದಿಹೆನಿತ್ತ || 195 ||
ಎನೆ ಹರುಷದಿ ನನೆ | ಗಣೆಗಳುಕುತಲಾ |
ಜನಪಾತ್ಮಜನೆಂದನು ಭಳಿರೆ ||
ತ್ರಿಣಯನ ದಯೆಯಿಂ | ಗೆಣೆವಕ್ಕಿಗಳಂ |
ತನುಭವಿಸುವ ದಿನ ಬಂತೆನುತ || 196 ||
ವಿಧಿ ಕೂಡಿಸಿತೆ | ಮ್ಮೆದೆಗಳನಾದರು |
ಮದುವೆಯು ಶ್ರೇಯಸ್ಕರವೈಸೆ ||
ಅದರಿಂ ಪಿತನೊಡ | ನುದಯಕೆ ಬಂದಪೆ |
ನಿದಿರಾಗಿರಿ ಎಂದುಸುರಿದಳು || 197 ||

**ಸೌರಾಷ್ಟ್ರ - ತ್ರಿವುಡೆ**

ಇಂತು ಸರಸದೊಳಿರಲು ಸಾಲ್ವನ |
ಮಂತ್ರಣದೊಳಿರುತಿರ್ದನಾ ದು |
ರ್ದಂತನೆಂಬ ಕುಳಿಂದಕನು ವಿಪಿ | ನಾಂತರದಲಿ || 198 ||
ಶಬರಪಡೆಯೊಡಗೂಡಿ ಬೇಟೆಯ |
ರಭಸದಿಂ ನಡೆತಂದನಾ ವನ |
ಕಬಲರನು ಕೊಂಡೊಯ್ದ ಕತದಿಂ | ಪ್ರಬಲನಾಗಿ || 199 ||
ಎಲ್ಲಿದರೊ ಹುಲುಕುನ್ನಿ ಬಾಲಕ |
ರೆಲ್ಲಿದರೊ ಭೂಸುರ ನೃಪಾತ್ಮಜ |
ರೆಲ್ಲಿಯಡಗಿದರೊಯ್ದು ತೋರ್ಪೆನು | ಸಾಲ್ವನಡಿಗೆ || 200 ||
ಕಂಡನಾ ದುರ್ದಂತನಾವಟು |
ಮಂಡೆಬಾಗಿಸಿ ಮಂಡಿಸಿದ ಬಗೆ |
ಕೊಂಡು ಹಿಡಿದೊಯ್ವಪೆನೆನುತ ಮುಂ | ಕೊಂಡು ಬಂದ || 201 ||
ಬರುವ ದುರುಳನ ಕಂಡು ಭೂಸುರ |
ತರಳನಯ್ಯೋ ಧರ್ಮಗುಪ್ತನೆ |
ಪುರಹರನೆ ಹಾಯೆಂದು ಮರುಗುತ | ಧರಣಿಗೊರಗೆ || 202 ||
ಗೆಳೆಯನಾರ್ತ ಧ್ವನಿಯನಾಲಿಸಿ |
ಗಳಿಲನೈತರೆ ಧರ್ಮಗುಪ್ತನು |
ಗಳಿಸಿತ್ಯೈ ಗೆಲವೆಂದ ಖಳನ | ಗ್ಗಳಿಸಿನಿಂದ || 203 ||

**ಮಾರವಿ - ಏಕ (ಆಗಸುತೆ ಕೇಳಾಶುಗಸಖ)**

ಸ್ಮರಹರನರಿತಾ ಭರದಿಂ ವೀರನ |
ಕರೆದಟ್ಟಲು ಹಲು ಮೊರೆಯುತ ಕಂಗಳೊ |
ಳುರಿಯುಗುಳುತ ಲಯ ಹರನಟ್ಟಾಸದಿ |
ಮರುತಗತಿಯ ಮಿಕ್ಕುರುತರ ವೇಗದಿ | ಬಂದನಂದು || 204 ||
ಯಾರೆಲ ಧೂರ್ತ ಭಿಕಾರಿ ಕುಳಿಂದನೆ |
ಬಾರಿತ್ತಲೆ ಸುಕುಮಾರರ ನೀಳ್ವಾ |
ಭಾರಿ ಭುಜದ ಬಲ ತೋರೆನ್ನೊಳು ರಣ |
ಮಾರಿಯನಣಲಿಂ | ಗೇರಿಪೆನೆಂದ | ವೀರನಂದು || 205 ||

ಘಡ ಘಡ ನೀನಾರ್ತಡೆದಪೆಯೇಕೆಲೊ |
ನಡೆಯತ್ತಲೆ ಕೆಂಜೆಡೆಗಳ ಕೆದರುತ |
ಹುಡುಗರ ಪಕ್ಷದಿ ನುಡಿದಪೆಯಾದರೆ |
ಹೊಡೆದುರುಳಿಪೆನೆಂದೊಡನಿದಿರಾದ | ಶಬರನಾಗ || 206 ||

**ಭಾಮಿನಿ**

ವೀರನಾಗಳೆ ದಂಡಧರನಂ |
ತಾರುಭಟಿಸುತ ಜಡಿದು ಖಂಡೆಯ |
ಹಾರಿಸಲ್ಕಾ ಶಬರನೆದೆಬಿರಿದುರುಳೆ ಭೂತಳಕೆ ||
ಘೋರನಿರ್ವರು ಕಾಣುತೀಪರಿ |
ಮಾರಮಥನನ ಮಹಿಮೆಯೆನ್ನುತ |
ಸಾರಿ ಪೇಳ್ವರು ನಡೆದ ಹದನವನೆಲ್ಲ ತಾಯೊಡನೆ || 207 ||

**ಘಂಟಾರವ - ಏಕ (ಸಖಿಯರು ಕೇಳಿರೀಗ ಪಯಣಗೈವ)**

ಮುನಿಗಳೆ ಕೇಳಿರಿತ್ತ | ದ್ರುಮಿಳನೆಂಬ |
ಘನ ಗಂಧರ್ವನ ಚರಿತ ||
ತನುಜೆಗೊಪ್ಪುವ ವರನು | ಎಲ್ಲಿಹನೆಂದು |
ಮನದಿ ಚಿಂತಿಸುತವನು || 208 ||
ಶಕ್ತರಾರ್ ತ್ರಿಜಗದೊಳು | ವಿಧಿಯ ನಿಶ್ಚಿ |
ತಾರ್ಥವರಿತು ಪೇಳಲು ||
ಗೋತ್ರಜಾಪತಿಯಲ್ಲದೆ | ಬೇರಿಲ್ಲವೆಂ |
ದತ್ತ ಸಾಗಿದನಿರದೆ || 209 ||
ಪ್ರಾರ್ಥಿಸುತಿರೆ ಮನದಿ | ಭಯಭಕ್ತಿಯೊ |
ಳಾ ತ್ರಿನೇತ್ರನು ದಯದಿ ||
ಪ್ರತ್ಯಕ್ಷನಾಗುತಲಿ | ಪುಣ್ಯೋದಯ |
ವಾಯ್ತೆಂದನೊಲವಿನಲಿ || 210 ||

**ನವರೋಜು - ಏಕ**

ಚಿಂತಿಸಬೇಡೆಲೊ ದ್ರುಮಿಳ | ಧೃತಿ |
ಯಾಂತಿರು ಪುಣ್ಯದ ಕಾಲ ||
ಬಂತೈಯಂಶುಮತಿಯ ಗುಣಕೊಪ್ಪುವ |
ಕಂತುವಿನಂತಹ ಕಾಂತನಾದ ಗಡ || 211 ||
ಸತ್ಯರಥಾತ್ಮಜನವನು | ಧರ್ಮ |
ಗುಪ್ತನೆನ್ನುವ ವರನು ||
ಶತ್ರುಗಳಿಂ ಪಿತೃ ಮಾತೃವು ಗ್ರಾಹ |
ಗ್ರಸ್ತರಾಗೆ ವಿಧಿಯೆತ್ತಿಹುದವನ || 212 ||
ಪಾರ್ವತಿಯಾಶ್ರಯವೆತ್ತು | ಮುನಿ |
ಶರ್ವರ ಸೂಕ್ತಿಯನಾಂತು ||
ಪೂರ್ವಭವದ ಭವ ನೀಗುತ ಪ್ರದೋ |
ಷವ್ರತದಲಿ ತತ್ಪರನಾಗಿರ್ಪನು || 213 ||
ಕರಗದಿರ್ಕೈ ತನುಮನದಿ | ಸ್ವಯಂ |
ವರಿಸಿಹರಿರ್ವರು ತಟದಿ ||
ಪರಿಣಯದೊಡನಶ್ವಾದಿ ಸುವಸ್ತುಗ |
ಳೆರೆಯೈ ಧಾರೆಯ ಧರೆಯಾಳ್ವಪನು || 214 ||

**ಭಾಮಿನಿ**
ತಡೆಯದಿರು ನಡೆಹೋಗು ಸಂತಸ |
ಕಡಲೊಳಾಳ್ವಪೆಯೆನಲು ದ್ರುಮಿಳನು |
ಮೃಡನ ಪದಕಭಿವಂದಿಸುತ ಬೀಳ್ಕೊಂಡು ನಡೆತರಲು ||
ಸಡಗರದೊಳಿದಿರೆದ್ದು ಕೈಮುಗಿ |
ದಡಿಗೆರಗುತಿಂತೆಂದಳಾಯತ |
ಜಡಜಲೋಚನೆಯಂಶುಮತಿಯತಿ ನಯದಿ ಪಿತನೊಡನೆ || 215 ||

**ಸೌರಾಷ್ಟ್ರ - ಅಷ್ಟ (ಜೀಯ ಲಾಲಿಸು ವೀರನತಿಕಾಯ)**
ಧನ್ಯಳಾದೆನು ಪೂರ್ವಪುಣ್ಯ ಸಫಲವಾಯ್ತು | ಅಪ್ಪ ಕೇಳು | ಇಚ್ಛಾ |
ಪೂರ್ಣವಾಯ್ತೆನಗೊಪ್ಪುವನ್ನನೊಲಿದನಲ್ತೆ | ಅಪ್ಪ ಕೇಳು || 216 ||
ಜಲಕೇಳಿಗಾಗಿ ಪೂಗೊಳದೆಡೆಗೈದಿರೆ | ಅಪ್ಪ ಕೇಳು | ಸ್ನೇಹ |
ಗಳಿಸಲಾಯ್ತಂಗಜನೊಲು ಚೆಲ್ವ ಪುರುಷನ | ಅಪ್ಪ ಕೇಳು || 217 ||
ಪೃಥ್ವಿಪಸುತ ಧರ್ಮಗುಪ್ತನೆಂಬವನಂತೆ | ಅಪ್ಪ ಕೇಳು | ಮಾ |
ತಿತ್ತಿಹೆ ನಾವಿಬ್ಬರತ್ತ ಹೋಗುವ ಬನ್ನಿ | ಅಪ್ಪ ಕೇಳು || 218 ||
ಒಳ್ಳಿತೊಳ್ಳಿತು ವರನೆಲ್ಲಿಹನೋ ಕಾಂಬ | ಮಗಳೆ ಕೇಳು | ಹರ |
ನೆಲ್ಲ ಪೇಳಿದನದನೊಳ್ಳೆ ಘಟನೆಯಿದು | ಮಗಳೆ ಕೇಳು || 219 ||
ಎಂದಿರ್ವರೊಂದಾಗಿ ಬಂದರಾ ಸ್ಥಳಕಾಗಿ | ಕೇಳಿರೆಲ್ಲ | ನೃಪ |
ನಂದನನೆಂದಂತೆ ಬಂದಿದಿರ್ಗೊಂಡನು | ಕೇಳಿರೆಲ್ಲ || 220 ||

**ಪಂತುವರಾಳಿ - ಆದಿ (ಇತ್ತ ಕೇಳುತ್ತರಾನಂದನಾ)**
ಬಾರೊ ಬಾರಿತ್ತ ನೃಪಜಾತನೆ | ಮಾರಾ |
ಕಾರನೇ ಸಂಗರಧೀರೋದ್ಧಾರನೇ || ಪ. ||
ಒಪ್ಪಿದೇ ನಾ ನಿಮ್ಮ ಧರ್ಮನೀತಿಗೆ | ಲೇ |
ಸಪ್ಪುದಯ್ಯ ಸತ್ಯ ಧರ್ಮದೊಂದಿಗೆ ||
ತಪ್ಪಲುಂಟೆ ಜಗದಿ ದೈವಯೋಗವ | ನಿಮ್ಮ |
ಒಪ್ಪಿತಕ್ಕೆ ಮೆಚ್ಚನೀವೆ ಸರ್ವವ || 221 ||
ಪೇಳಲೇಕಿನ್ನಂಶುಮತಿಯುದ್ವಾಹಕೆ | ಕಾಲ |
ವೇಳೆಯರಿತು ಬನ್ನಿರೆಮ್ಮಾವಾಸಕೆ ||
ಜಾಲವಲ್ಲ ಹೋಗಿ ಬನ್ನಿರೆನ್ನುತ | ದ್ರುಮಿಳ |
ನಾಲಯಕೈತಂದನಾತ್ಮಜಾತೆ ಸಹಿತ || 222 ||

**ಬೇಗಡೆ - ಏಕ (ಏನೆಂಬೆ – ದೈತ್ಯ ಮಾಡಿದ ಮಾಯಕವನು)**
ಏನೆಂಬೆ | ನಂಶುಮತಿಯ ಲಗ್ನದ ಸೊಬಗೇನೆಂಬೆ || ಪ ||
ಏನೆಂಬೆನಾತ್ಮಜಾತೆಯ ಲಗ್ನವೆನುತ |
ಮಾನಿತ ದ್ರುಮಿಳನುತ್ಸಾಹವಗೊಳುತ |
ತಾನೆದ್ದು ನೆಂಟರಿಷ್ಟರ ಕರೆಸುತ್ತ |
ನಾನಾ ದೇಶಕೆ ಭೃತ್ಯರನು ಕಳುಹಿಸುತ |
ಸಾನುರಾಗದೊಳಾಪ್ತಮಿತ್ರರ |
ಮೇಣಮರ ಯಕ್ಷೋರಗರ ಸಂ | ತಾನವನು ಕರೆಸುತ್ತ ರಮ್ಯ ನ |
ವೀನತೆಯ ಮಂಟಪವ ಗೈಸಿದ | ನೇನನೆಂಬೆ || 223 ||
ಭರಿತವಾಗಲು ಪರಿಕರಗಳು ಎಲ್ಲ |
ನೆರೆಯಲು ಗಂಧರ್ವಾದಿಗಳ ಸಮ್ಮೇಳ |
ವರ ಶುಚಿವ್ರತನೊಡನವನಿಪಾತ್ಮಜನು |
ಭರದಿ ದಿಬ್ಬಣಗೂಡಿ ಬರಲು ದ್ರುಮಿಳನು |
ಹರುಷದಿಂ ತಾನಿದಿರುಗೊಳ್ಳುತ |
ಕರವಿಡಿದು ಮಂಟಪಕೆ ಕರತಂ |
ದಿರಿಸಿದಾಮೇಲ್ ಮಗಳ ಧಾರೆಯ |
ನೆರೆದನತಿ ಶುಭವಾದ್ಯ ಘೋಷದಿ || 224 ||

**ವಾರ್ಧಕ**
ಸುರರಭ್ರುದೊಳ್ ಜಯಧ್ವನಿಯೊಡನೆ ಪೂಮಳೆಯ |
ಗರೆಯಲಾಗಳೆ ದ್ರುಮಿಳನೊಲಿದಿತ್ತನುಡುಗರೆಯ |
ಕರಿ ಹಯಂಗಳ ಲೆಕ್ಕಲೆಕ್ಕದಿಂ ರಥ ಪದಾತಿಗಳ ಸಾಸಿರಲೆಕ್ಕದಿಂ ||
ತರತರದ ರತ್ನಮಯ ಮಣಿಭೂಷಣಗಳನಿ |
ತ್ತುರು ತರದ ದಿವ್ಯಾಸ್ತ್ರ ಶಸ್ತ್ರಂಗಳಂ ಸಹಿತ |
ಪರಿವಿಡಿಯೊಳಾಂತು ಧುರಮಂ ನೆಗಳ್ವ ರೀತಿ ನೀತಿಗಳ ನಿರವಿಸುತೆಂದನು || 225 ||

**ತೋಡಿ - ಅಷ್ಟ (ಬಂದಳಾಸಭೆಯೊಳಾಗ)**
ಇತ್ತಕೇಳ್ ಧರ್ಮಗುಪ್ತ | ಪಾರ್ಥಿವಕುಲ |
ರತ್ನಕೇಳ್ ಪೇಳ್ವ ಮಾತ || ಪ ||
ಇತ್ತಕೇಳ್ ಪರಭೃತ್ಯನಾಗಿರ |
ಲೆತ್ತಣದು ಸತ್ಕೀರ್ತಿಯಯ್ಯನ |
ಪೃಥ್ವಿಯನು ವಶಗೈದು ರಾಜಾ |
ದಿತ್ಯನಾಗೈ ಕ್ಷಾತ್ರತೇಜದಿ || 226 ||
ನೋಡಿದಕೊ ಶಸ್ತ್ರಾಸ್ತ್ರಗಳ ಜತೆ |
ಮಾಡಿ ಗಂಧರ್ವಾದಿ ಸೇನೆಯ |
ಖೋಡಿಸಾಲ್ವನ ತರಿದರಾಳ್ವಿ ಸ |
ಗಾಢದಿಂದ ವಿದರ್ಭದೇಶವ || 227 ||
ನಡೆ ಮಗನೆ ಧುರಕಳುಕದೀಕ್ಷಣ |
ಮೃಡನ ಮೆಚ್ಚಿಸುತಖಿಳ ವರಗಳ |
ಪಡೆದು ಹೋಗಾ ಖಳಕುಲವ ಸದೆ |
ಬಡಿದು ಮೆರೆಸೈ ಕುಲದ ಘನತೆಯ || 228 ||
ಎಂದೆನಲು ನೃಪನಣುಗನಾಗಳೆ |
ಮುಂದರಿದು ಸುಸ್ಥಳವನರಸುತ |
ನಿಂದನುರುತರ ತಪದಿ ಜಯ ಜಯ |
ವೆಂದು ಸ್ತುತಿಸಿದನೀಶನಂಘ್ರಿಯ || 229 ||

**ಕಂದ ಪದ್ಯ**
ಅತಿ ಭಯ ಭಕ್ತಿಯೊಳಾನೃಪ |
ಸುತನೇಕಾಗ್ರತೆಯನಾಂತು ಕಡುತಪಗೆಯ್ಯಲ್ ||
ಶಿತಿಕಂಠನಾತನಾತ್ಮ |
ಸ್ಥಿತಿಯಂ ತನ್ಮನದೊಳರಿತು ಮೈದೋರ್ದಂದಂ || 230 ||

**ಮುಖಾರಿ - ಝಂಪೆ**
ಮೆಚ್ಚಿದೆನು ಮಗನೆ ತವ ನಿಚ್ಚಟದ ಭಕ್ತಿಗಿ |
ನ್ನಿಚ್ಛೆ ಯಾವುದೊ ತಿಳಿದೆ ಮಚ್ಚಿತ್ತದೊಳಗೆ || ಪ ||
ವರ ಪ್ರದೋಷವ್ರತದಿ ವರಿಸಿರ್ಪನೆನ್ನನುವ |
ಗಿರಿಜಾತೆಯೇ ಒಲಿದು ನೆರವನಿತ್ತಿರಲು ||
ಬರಿದೆ ಚಿಂತಿಸಲೇಕೆ ದುರುಳರಟ್ಟುಳಿಗಾಗಿ |
ಪರಿಪಾಲಿಸುವ ಕರ್ತನಿರಲು ನಿನ್ನೊಡನೆ || 231 ||
ಬಂದುದಾಯ್ತಿನ್ನು ಭಯ ಸಂದೇಹ ಬಿಟ್ಟು ನಡೆ |
ಮುಂದೆ ಸಾಲ್ವನೊಳು ಜಯ ಹೊಂದಲಿರ್ದಪುದು ||
ಇಂದು ವೀರೇಶ ನಿನ್ನೊಂದಿಗೈತಹನು ಭಯ |
ಬಂದರಗಜೆಯು ಕಾಯ್ವಳೆಂದು ಮರೆಯದಿರು || 232 ||
ಎನುತ ವೀರನ ಕರೆದು ಸನುಮತದಿ ಕಳುಹಲಾ |
ಕ್ಷಣದಿ ಪಶುಪತಿಯಾಜ್ಞೆಯನು ಶಿರದೊಳಾಂತು ||
ಜನಪಾತ್ಮಜನು ಮರಳಿ ಘನಶಸ್ತ್ರಗಳ ಧರಿಸಿ |
ರಣಕೆ ಸನ್ನಿದನಾದನನಿತು ಬಲಗೂಡಿ || 233 ||

**ಭಾಮಿನಿ**
ಧರ್ಮಗುಪ್ತನು ಮನದಿ ಯೋಚಿಸಿ |
ಧರ್ಮಶಾಸ್ತ್ರವ ಬಲ್ಲ ದೂತನ |
ದುರ್ಮತಿಯ ಬಳಿಗಟ್ಟಿದನು ವಶಗೈದ ರಾಜ್ಯವನು ||
ಒಮ್ಮತದೊಳೊಪ್ಪಿಸುವುದಲ್ಲದಿ |
ರೆಮ್ಮ ಯುದ್ಧಕೆ ಬರುವುದೆಂದು ಸ್ವ |
ಧರ್ಮನೀತಿಯನೋದಿ ಬಾರೆಂದಿತ್ತನಪ್ಪಣೆಯ || 234 ||

**ಸೌರಾಷ್ಟ್ರ - ತ್ರಿವುಡೆ**
ಕೇಳಿರೈ ಮುನಿಮುಖ್ಯರೆಲ್ಲರು |
ಸಾಲುವನ ಸಭೆಗೈದಿ ದೂತರು |
ಪೇಳಿದರು ತಮ್ಮೊಡೆಯನಾಜ್ಞೆಯ | ನಾಳುತನದಿ || 235 ||
ಖೂಳತನ ಬಿಡು ಸತ್ಯರಥನ ವಿ |
ಶಾಲ ಭೂಮಿಯನೆಮ್ಮ ರಾಯರ |
ಪಾಲಿಗೊಪ್ಪಿಸಿ ನಡೆವುದತಿಹಿತ | ಮೇಲನರಿತು || 236 ||
ಧರೆಯನೊಪ್ಪಿಸದಿರಲು ಯುದ್ಧಾ |
ತುರದೊಳಿದಿರಾಗುವುದು ಕೇಳೆಲೊ |
ಅರಿವಿಲಿಗಳಂದದಲಿ ಪ್ರಾಣವ | ತೊರೆಯಲೇಕೋ || 237 ||
ಅರಿಯೆಯಾ ನಮ್ಮಾಣ್ಮನನು ನೀ |
ನಿರಿದು ಕೊಂದಾತನ ಕುಮಾರಕ |
ಧುರವಿಜಯನಹ ಧರ್ಮಗುಪ್ತನ | ಚರಿತೆಗಳನು || 238 ||
ಸಾಲ್ವನಾಕ್ಷಣ ಪ್ರಳಯಕಾಲದಿ |
ಬೀಳ್ವ ಕೆಂಗಿಡಿಯಂತೆ ಮಸಗುತ |
ಪೇಳ್ವುದೇಂ ನಡೆ ಪೋಗು ತಡೆ ನಿ | ಮ್ಮಾಳ್ವನಲ್ಲಿ || 239||
ಸೋಲ್ವನೇ ಸಂಗ್ರಾಮದಲಿ ಕ್ಷಮೆ |
ತಾಳ್ವನೇ ಧರೆಯೀವೆ ಶರದಲಿ |
ಕೀಳ್ವೆ ಕರುಳನು ಮೇಲ್ವರಲ್ಕದೆ | ಸೀಳ್ವೆನೆಂದ || 240 ||

**ಭಾಮಿನಿ**
ಎಂದು ಕೋಪೋದ್ರೇಕದಿಂ ಭುಗಿ |
ಲೆಂದು ಘೋರ್ಗುಡಿಸುತ್ತ ದೂತರ |
ಮುಂದೆಳೆದು ಹೊಡೆದಟ್ಟಿದಾಮೇಲ್ ಸಾಲ್ವನರಮನೆಗೆ ||
ಬಂದು ಶಯ್ಯಾಗೃಹದಿ ಮಲಗಿರ |
ಲಂದಿರುಳು ದುಃಸ್ವಪ್ನದರ್ಶನ |
ದಿಂದ ನಡುಗುತಲೆಂದಳಾತನ ಮಡದಿ ಮುರಿದೆದ್ದು || 241 ||

**ಯರಕಲ ಕಾಂಭೋದಿ - ಅಷ್ಟ**
ಕಾಂತ ಚಿತ್ತವಿಸು ಮಾತ | ಈಗೆನ್ನ ಮನಕೆ |
ಚಿಂತೆ ಹೆಚ್ಚಿತು ಧೀಮಂತ ||
ಎಂಥ ದುಃಸ್ವಪ್ನ ದುರಂತವೊ ತಿಳಿಯೆ ನಾ |
ಪಂಥವ ಬಿಟ್ಟೆನ್ನ ಶಾಂತಗೊಳಿಸು ಕಾಂತ || 242 ||
ಮರುಳಾದೆಯೇನೆ ಕಾಂತೆ | ಏತಕೆ ಚಿಂತೆ |
ಸ್ಥಿರತೆಯಿಂದೊರಗು ಮುಂತೆ ||
ಭರಿತ ವಿಕಾರದೊಳಿರಲು ಸ್ವಪ್ನಗಳಾಗೆ |
ತರಹರಗೊಳದೆನ್ನ ಕರಕರಿಸದಿರೀಗ || 243 ||
ಭಾಳಲೋಚನ ಶಿವನ | ಅಂಧಕಾದ್ಯರನು |
ಕಾಲಗೊಪ್ಪಿಸಿದಾತನ ||
ಶೀಲ ಭಕ್ತರು ನಿನ್ನ ಕಾಲಗೊಪ್ಪಿಪರಂತೆ |
ಕಾಳಗ ಬಿಟ್ಟು ಸಮ್ಮೇಳದೊಳಿರೆ ಲೇಸು || 244 ||

ಶೂಲಿಯ ಬಲವಿರಲು | ನರಹುಳುಗಳು |
ಸೋಲಿಸಲುಂಟೆ ಪೇಳು ||
ಶೂಲಿಯಾದರು ಸಮಪಾಳಿ ಬಿಟ್ಟಪನೆ ಮೇಣ್ |
ಧೂಳಿ ಮಾಳ್ಪೆನು ಬಂದ ಖೂಳರನೊಮ್ಮೆಗೆ || 245 ||
ತಪ್ಪಾಯಿತಲ್ಲೊ ದೇವ | ವಿದರ್ಭ ದೇಶ |
ವೊಪ್ಪಿಸಲೇನು ಹೇವ ||
ತಪ್ಪನು ಒಪ್ಪಿಕೊಂಡು ಬಪ್ಪ ಸೌಖ್ಯವನುಂಡು |
ಇಪ್ಪುದೊಳ್ಳಿತು ವ್ಯರ್ಥ ದರ್ಪ ತೋರದಿರಯ್ಯ || 246||

**ಮುಖಾರಿ - ಏಕ**

ಸಾಕು ನೀ ಶೋಕಿಸಬೇಡೆಲೆ ಬಾಲೆ |
ಸ್ಥೈರಿಸು ಗುಣಶೀಲೆ || ಪ. ||
ಧುರದಿ | ಜಯವೆಂಬುದು ದೈವಾಧೀನ | ಬಿಡದಿರೆ ಶಿವಧ್ಯಾನ |
ಭರದಿ | ಬಲವಪ್ಪುದು ದೈವದ ಕರುಣ |
ಎರಳೆನಯನೆ ಜಯವರಿಸುತಲೈತಹೆ |
ಮರೆದೊರಗಿದರೇಂ ಕೀರ್ತಿಯದಲ್ಲವೆ || 247 ||
ಎನುತಾ | ಪರಿಪರಿಯಲಿ ಬೋಧಿಸುತಾಗ | ನೋಡಲು ಮುಂಭಾಗ |
ವಿನತಾ | ನಂದನನಿಂದೇಳಲು ರಾಗ ||
ದನಿಗೊಡಲಳಿಗಿಳಿ | ಯನಿತರೊಳಾಕೆಯ |
ತಣಿಸುತ ಪೊರಟಾಸ್ಥಾನಕೆ ನಡೆದಾ || 248 ||

**ಕಂದ ಪದ್ಯ**

ಇತ್ತಲ್ ಸಾಲ್ವನ ಪುರಸಾ |
ರ್ದತ್ತಿತ್ತಲ್ ಸುತ್ತ ಮುತ್ತಿ ನೃಪಸುತನಾಜ್ಞಾ ||
ವರ್ತಿಗಳೆಸಗಲ್ ದಳದುಳ |
ಬಿತ್ತರಿಸಿದರಸುರಭೃತ್ಯರಾಳ್ವನ ಬಳಿಯೊಳ್ || 249 ||

**ಮುಖಾರಿ - ಏಕ**

ಚಿತ್ತೈಸಬೇಕು ದೊರೆರಾಯ | ಬಂದಿದೆ ನೋಡತ್ತ |
ಶತ್ರುಮಾರ್ಬಲವು ಪುರದತ್ತ ||
ಕತ್ತಿ ಸಬಳ ಕುಂತಾದಿ ಶಸ್ತ್ರಗಳ |
ನೆತ್ತುತ ಬಂದೀ ಪತ್ತನ ಬಾಹೆಯೊ |
ಳತ್ತಲಿತ್ತ ಧುಮ್ಮಿಕ್ಕುತ ಧಾಳಿಯ |
ನಿತ್ತೆಮ್ಮನು ಹೊಯ್ದಟ್ಟಿದರಯ್ಯ || 250 ||
ಕಾರ್ಯಕಾರಣವರಿಯೆವಯ್ಯ | ನೋಡಿದರೇ ಮಹಾ |
ಮಾರಿಯ ಬಳಗದ ಹಾಂಗಿಹುದಯ್ಯ ||
ಧೈರ್ಯವೆಷ್ಟೊ ಯಮರಾಯ್ರು ಕೂರಾಳ್ಗಳ |
ಕ್ರೌರ್ಯತೋರ್ಪರಾ ಸೈನಿಕರಲ್ಲಿ |
ಶೌರ್ಯದ ಮದಗಜ ರಥ ಹಯಗಳ ಬಲ |
ವಾರ್ಯಮಗಾದರು ಲೆಕ್ಕಿಸಲರಿದು || 251 ||

**ಭೈರವಿ - ಅಷ್ಟ**

ಭೃತ್ಯರ ನುಡಿಯ ಕೇಳಿ | ಸಾಲ್ವನು ಗಜ |
ರುತ್ತಲೆಂದನು ಕೆರಳಿ ||
ಮುತ್ತಿದರೇ ಪುರ | ಶತ್ರುಭಟರು ಮುರಿ |
ದಿತ್ತಪೆ ಮಾರಿಗೆಂದು || 252 ||

ಕೇಳಿರಮಾತ್ಯರೆಲ್ಲ | ರಣಧೀರರೆ |
ಕೇಳಿರಿ ಸುಭಟರೆಲ್ಲ ||
ಕಾಳಗ ಹಾರಯ್ಸಿ | ದಾಳಿಗೊಟ್ಟಿಪರಂತೆ |
ಖೂಳ ಹಗೆಗಳುಕ್ಕುತ || 253 ||
ತಿಳಿದಿರೆ ಹೊಸ ಕಥೆಯ | ಸತ್ಯರಥ |
ನಳಿದ ಮೇಲಣ ಬಗೆಯ ||
ಉಳಿದಿರ್ಪನಂತೆಯಾ | ಹುಲು ನೃಪಾತ್ಮಜನೊರ್ವ |
ಹಳಚುವನಂತೆಮ್ಮೊಳು || 254 ||
ಜನಕನ ರಾಜ್ಯವನು | ಈಳೊವ್ಯ್ವ ಸಾ |
ಧನೆಯೊಳೈತಂದಿಹನು |
ಬಣಗುಗಂಧರ್ವರಂ | ಗನೆಯ ವರಿಸಿ ಮತ್ತಾ |
ಗಣಿಕೆ ಹೆಗ್ಗಣನಿರ್ಪನು || 255 ||
ಬರಲಿ ಯುದ್ಧಕೆ ಹೊಡೆದು | ಬಡಿದಿಕ್ಕುತ |
ನೆರವಿತ್ತವರ ತರಿದು ||
ಮೆರಸಬೇಕೈ ಜಯ ವರಿಸದಿದ್ದರೆ ಸಾಲ್ವ |
ದೊರೆಯಾಗಿರ್ಪುದೆ ವ್ಯರ್ಥವು || 256 ||
ಎನೆ ವೀರಬಾಹುವಾಗ | ನರಹುಳುವಿಗೆ |
ಇನಿತಾಯ್ತೆ ಧೈರ್ಯವೀಗ ||
ಕ್ಷಣದೊಳಿರಿದು ಮತ್ತಾತನ ಬಲ ಮುರಿದು ಕೈ |
ಮಿನಿಗಟ್ಟಲಿಹೆನೆಂದನು || 257 ||

**ಮಾರವಿ - ಏಕ**
ಇಂತೆನಲೂರ್ಧ್ವಕೇ | ಶಾಂತಕನೋಲ್ ಖತಿ |
ಯಾಂತು ನುಡಿದ ಭಳಿರೆ ||
ಪಂಥದೊಳಹಿತರ | ತಾಂ ತರಿದಿಕ್ಕಲು |
ಮುಂತೈದುವೆನೆನುತ || 258 ||
ಕೊಡು ಕೊಡು ನೇಮವ | ಬಿಡುಗಣ್ಣರೊ ಮೇಣ್ |
ಮೃಡನ ಬಲವೆ ಬರಲಿ ||
ಕೆಡಹುವ ಭಟನಿರೆ | ಪೊಡವಿಪಸುತನುಸಿ |
ರಡಗಿಸದಿರ್ದಪೆನೆ || 259 ||
ಕೇಳುತವರ ನುಡಿ | ಸಾಲುವನಿರ್ವರ |
ಮೇಲಿಟ್ಟರಿಬಲವ ||
ಮೂಲತರಿದು ಸುಖ | ಬಾಳುವುದೆನ್ನುತ |
ಬೀಳುಗೊಟ್ಟನಾಗ || 260 ||
ಬಂದರು ಗದೆಗೊಂ | ಡಂಧಕಹರನೆನು |
ವಂದದೊಳಾರ್ಭಟಿಸಿ ||
ವೃಂದಾರಕರೆದೆ | ಗುಂದಲಸುರಬಲ |
ಸಿಂಧುವನೊಡಗೂಡಿ || 261 ||
ಎರಡು ಬಲಗಳ | ಬ್ಬರದಿಂದುಬ್ಬುತ |
ಸುರರಸುರರ ತೆರದಿ ||
ಧುರಕಿದಿರಾಗಲು | ದೊರೆ ಸಾಲ್ವಾತ್ಮಜ |
ಗೊರೆದನು ಧರಣಿಪನು || 262 ||

**ತೋಡಿ - ಅಷ್ಟ (ಯಾರೆಲಾಮನುಜ ಬಂದಿರುವವ)**

ಯಾರೆಲಾ ದುರುಳ | ಎನ್ನೊಳು ಕಾದ |
ಲಾರೆಲಾ ದುರುಳ ||
ಯಾರು ನೀಂ ಘಡ ದುಷ್ಟ ಜವ್ವನ |
ವೇರಿ ಬಂದೈ ಶಲಭದಂದದಿ |
ಹಾರಿ ಸಮರಾಗ್ನಿಯಲಿ ಬೇಯುವ |
ಹೋರೆಯೇತಕೆ ಸಾರು ಹಿಂದಕೆ || 263 ||
ಯಾರು ಕೇಳ್ವವನು | ಸಾಲ್ವನ ಸುಕು |
ಮಾರ ನಾನಹೆನು ||
ಪೋರ ನಿನಗೇಕೆಮ್ಮೊಳಾಹವ |
ಘೋರ ಸಮರದ ನೀತಿಯರಿಯದೆ |
ಭಾರಿ ಸಿಂಹದ ಬಾಯ್ಗೆ ಕುರಿಪೋ |
ಲೇರಿ ಬೀಳ್ವ ವಿಚಾರವೇಕೆಲೊ || 264 ||
ಸಾಕು ನಾ ಬಲ್ಲೆನು | ಜಂಬದ ಮಾತು |
ಪೋಕೆ ಮೃತ್ಯುವನು ||
ಏಕೆ ತಬ್ಬುವೆ ಪೋಗು ಸಾಲ್ವನ |
ಜೋಕೆಯಿಂ ಕಳುಹಿತ್ತಲಾತನ ಶಾ |
ಕಿನಿಯರಿಂಗುಣಿಸಿ ರಿಪುಗಳ |
ನೂಕಿಯಮನೆಡೆಗೊಯ್ವೆ ರಾಜ್ಯವ || 265 ||
ಬಲ್ಲೆನಾ ಕಥೆಯ | ನಿನ್ನಯ್ಯ ನೀ |
ಗೆಲ್ಲಲು ನೀ ಕಂಡೆಯ ||
ಅಲ್ಲಿಗೆಲ್ಲರ ನೂಕುವತಿಬಲ ಸಾಲ್ವನೊಳ |
ಗಿಲ್ಲೆಂದು ತಿಳಿದೆಯ | ದೆಲ್ಲಿಕಾಂಬದುಲೂಕವರ್ಕನ |
ಹಲ್ಲ ಮುರಿದಪೆ ಹೋಗು ದಿಮ್ಮನೆ || 266 ||
ಮುಚ್ಚು ಬಾಯ್ ಖಳನೆ | ಮೈಗೊಬ್ಬಿನಿಂ |
ಹೆಚ್ಚಲೇಂ ಧೂರ್ತನೆ ||
ಸಚ್ಚರಿತ್ರೆಯ ಸ್ವೈಸದಯ್ಯನ |
ಕೊಚ್ಚಿ ಕೆಡಹಿದ ದುಷ್ಟರುಳಿವರೆ |
ಮೆಚ್ಚುವನೆ ಶಿವನೆನ್ನ ಶಸ್ತ್ರದ |
ಕಿಚ್ಚಿಗಾಹುತಿಯಪ್ಪುದರಿಯೆಲೊ || 267 ||
ಸತ್ವವಷ್ಟಿಹುದೇ | ತೋರೆಲೊ ರಣ |
ಕ್ಷೇತ್ರದೊಳ್ ಭುಜದೆ ||
ಸತ್ವಸಹಸಿಗಳೆಮ್ಮೊಳಾಹವ |
ವಿತ್ತು ಜೈಸಿದರಿಲ್ಲವೆಂಬುದ |
ನಸ್ತ್ರಮುಖದಿಂ ತೋರ್ಪೆನೆಂದಥ |
ಮಾತ್ಮನೆಚ್ಚನು ನಿಶಿತ ಶರಗಳ || 268 ||

**ಕೇದಾರಗೌಳ - ಝಂಪೆ**

ಖಳನಸ್ತ್ರಗಳ ತರಿಯುತ | ಪ್ರತ್ಯಸ್ತ್ರ |
ಗಳನೆಸೆಯೆ ಧರ್ಮಗುಪ್ತ ||
ಪಿಳುಕಿನಿಂ ಖಂಡಿಸಿದನು | ಬಳಿಕ ಕಣೆ |
ಮಳೆಗರೆದನಾ ಧೂರ್ತನು || 269 ||
ಬರುವಸ್ತ್ರಗಳ ಮಧ್ಯದಿ | ಕತ್ತರಿಸಿ |
ಶರಜನಂತಾವೇಶದಿ ||
ಧರಣಿಪಾತ್ಮಜನೆಚ್ಚನು | ಧಗಧಗನೆ |
ಉರಿವ ದಿವ್ಯಾಸ್ತ್ರಗಳನು || 270 ||

ಆ ಸುದಿವ್ಯಾಸ್ತ್ರಹತಿಗೆ | ತಾನೂರ್ಧ್ವ |
ಕೇಶಿಯೊರಗಲು ಧಾತ್ರಿಗೆ ||
ರೋಷದಿಂದಿದಿರು ನಿಂತು | ಸಾಲ್ವನಾ |
ಧೀಸಚಿವ ನುಡಿದನಿಂತು || 271 ||
ಎಲವೊ ನರಗುರಿಯೆ ನೀನು | ನಮ್ಮೊಡನೆ |
ಕಲಹಕನುವಾದೆಯೇನು ||
ಬಲದಿ ಬಲ್ಲಿದರ ಗೆಲಿದು | ಜೀವದಿಂ |
ದುಳಿಯಲಿರ್ದಪೆಯ ಮುಂದು || 272 ||
ಯಾರು ನೀನೆಲೊ ದುರಾತ್ಮ | ನಾ ಬಂದ |
ಕಾರಣವನರಿಯೆ ಧೂರ್ತ ||
ಹೋರದಿರು ಹೋರಿಯಂತೆ | ಸತ್ತ್ವನ |
ದಾರಿ ತೋರಿಸುವೆನಲ್ತೆ || 273 ||
ತರಳ ನೀ ಬಲ್ಲೆಯೇನು | ನಿನ್ನಯ್ಯ |
ನರಿತಿಹನು ಮೊದಲೆನ್ನನು ||
ದೊರೆ ಸಾಲ್ವನಿಗೆ ಸಚಿವನು | ಧುರಧುರಂ |
ಧರ ವೀರಬಾಹುವಾನು || 274 ||
ಇಂತು ಕಾದಾಡುತಿರಲು | ಹರನಾಜ್ಞೆ |
ಯಂತೆ ರಕ್ಷಣೆ ಗೆಯ್ಯಲು ||
ಮುಂತೆ ತಡೆದಿಂತೆಂದನು | ಕಾಲಾಗ್ನಿ |
ಯಂತಿರುವ ವೀರೇಶನು || 275 ||

**ಭೈರವಿ - ಮಟ್ಟೆ (ಬಿಡು ಬಿಡಾ ಮಹಾ ಸಿಂಹ ರಾಜನ)**
ಭಳಿರೆ ನಿಲ್ಲೆಲೊ ಖಳಕುಲಾಧಮ |
ಬಲುಹ ತೋರ್ದರೇ ಕ್ಷಣದಿ ತರಿವೆ ನಾ |
ಎಳೆಯರೊಂದಿಗೇ ಕಾದಿದರೆ ಭಲಾ |
ಬಲದೊಳಗ್ಗಳ ಸುಭಟನಾದೆಯಾ || 276 ||
ಯಾರು ನೀ ಮದದಾನೆಯಹೆಯಲೋ |
ಕೋರೆ ಹಲುಗಳ ಕೆದರ್ದಜಟೆಗಳಾ |
ತೋರುತೆಮ್ಮೊಳು ಸೆಣಸಲೇಕೆಲೊ |
ಸಾರು ಹಿಂದೆ ಮುಂದೋರಲಿರಿವೆನು || 277 ||
ಬಲ್ಲೆಯಾ ನೀನೆನ್ನಾದಿಚರಿತೆಯಾ |
ಕ್ಷುಲ್ಲ ದಕ್ಷನಾ ಮಖವಿಧ್ವಂಸನಾ |
ಮಲ್ಲ ವೀರಭದ್ರಾಂಕನಿರುವರೇ |
ಗೆಲ್ಲ ವಿಜಯವಿನ್ನೆಲ್ಲ್ಯನ್ಯಾಯವು || 278 ||
ಭಲೆ ಶಭಾಸು ನೀ ವೀರನೇ ಕಣಾ |
ಬಳಿದು ಭಸ್ಮವತ್ತುತ್ತ ಸಾರೆಲೊ |
ಇಳೆಯ ಸೇರುತ ಬಲವ ತೋರುತ |
ಕಳೆದು ಮಾನವ ಬದುಕಲೇಕೆಲೋ || 279 ||
ಸತ್ಯ ಧರ್ಮವ ಅಳಿಸಿದಧಮರ |
ಕುತ್ತಿ ಕೆಡಹುವಾ ಧರ್ಮವೆಮಗಿರೇ |
ಸತ್ಯರಥನ ಸಾಮ್ರಾಜ್ಯವಾತನ |
ಪುತ್ರಗೊಪ್ಪಿಸಿ ಮರಳ್ವೆ ತಿಳಿಯೆಲಾ || 280 ||
ಮಾತಿನಿಂದಲೇನಾತ್ಮಶಕ್ತಿಯ |
ಘಾತಿಯಲ್ಲಿ ನೋಡೆಂದು ದುರುಳನು |
ಆತು ಹೊಡೆಯಲು ಗದೆಯ ದಕ್ಷನಾ |
ರಾತಿ ಸೆಳೆಯುತ ತಿರುಗಿ ಹೊಯ್ದನು || 281 ||

**ಕಂದ ಪದ್ಯ**
ನುಡಿದಪುದೇಂ ವೀರೇಶನ |
ಹೊಡೆತಮನಾ ವೀರಬಾಹುಕಂ ಸೈರಿಸದಾ ||
ಕಡೆಯಿಂದಸುವಿಡಿದೋಡಲ್ |
ದಡಿಗ ಭಟರ್ ನೊಂದು ಬೆಂದು ಮರಳಿದರತ್ತಲ್ || 282 ||

**ವಾರ್ಧಕ**
ಅನಿತರೊಳಗಪರಾಬ್ಧಿಗಿಳಿಯಲರ್ಕಂ ಬಳಿಕ |
ಜನರೆಲ್ಲ ವಿಶ್ರಾಂತಿ ಗೈದಲೋರೆಂದೆಡೆಗೆ |
ದಿನವುರುಳಿ ಕಾರುಗತ್ತಲೆ ಮುಸುಕಲಾ ರಾತ್ರಿ ಸಾಲ್ವೇಂದ್ರ ನಿದ್ರಿಸುತಿರೆ ||
ಘನ ಮಹಾ ದುಃಸ್ವಪ್ನಮಂ ಕಂಡು ಸುಗಿದೆದ್ದು |
ತನಗಿದೇಂ ಮರಣಸೂಚನೆಯೆಂಬ ಚಿಂತೆಯಲಿ |
ಮನಮರುಗುತೋಲಗಂಗೊಟ್ಟನಾ ಭದ್ರಕೇಶಿ ಪ್ರಮುಖ ಸಚಿವರೊಡನೆ || 283 ||

**ಕಾಂಬೋಧಿ - ಝಂಪೆ**
ಕೇಳಿರೈ ಸಚಿವಾಪ್ತ | ಶೀಲ ಭಟರೆಲ್ಲ ನ |
ಮ್ಮೇಳಿಗೆಗೆ ಕುಂದು ಬರಲಾಯ್ತು ||
ಕಾಳಗದಿ ಮಡಿದನೈ | ಬಾಲಕನು ಮಂತ್ರಿ ಜನ |
ಜಾಲಕಪಜಯವೊದಗಿತಲ್ಲಾ || 284 ||
ನಿದ್ರಿಸಿದೊಡೇನು ಸುಖ | ನಿದ್ರೆಯುಂಟೇ ನೋಡೆ |
ಕ್ಷುದ್ರವಹ ದುಃಸ್ವಪ್ನಗಳಲಿ ||
ದುರ್ದಶೆಯು ಹೊದ್ದಿತೆಂ | ದಾರ್ದುದೆನ್ನೀ ಮನವು |
ಭದ್ರನಾಗುವೆನೆಂತೊ ತಿಳಿಯೆ || 285 ||
ಹಗೆತನದಿ ಮುತ್ತಿರುವ | ವಿಗಡರನ್ನಳಿಸದಿರೆ |
ಜಗದಿ ಜಸ ಮಾಣದಿರ್ದಪುದೇ ||
ದಿಗಧೀಶರಲ್ಲದೆಯೆ | ನಗುವರೈ ಭೂಪರೊ |
ಮ್ಮೆಗೆ ಪೇಳ್ವಿರೊಂದುಪಾಯವನು || 286 ||
ಇಂತೆನಲ್ಕೆದ್ದು ದು | ರ್ಮಂತ್ರಿಯೊರೆದನು ಚಿಂತೆ |
ಬಂತೇಕೆ ತಂತ್ರಜ್ಞನಿರಲು ||
ಮಂತ್ರಿ ಮಾಯಾ ಮೋಸ | ತಂತ್ರದಿಂ ಶತ್ರುಬಲ |
ವಂತ್ಯಗೊಳಿಸಲು ಬೇಹುದೀಗ || 287 ||
ಇರುಳಿನಲಿ ಹೊಕ್ಕು ಮ | ದ್ದರಿಯಬೇಕಹಿತಬಲ |
ಮರೆದೊರಗಿದಾ ಪಾಳ್ಯವರಿತು ||
ಕೊರತೆಯಿಲ್ಲೆಮ್ಮ ಕುಲ | ದರಸುಗಳ ನೀತಿಯಿದು |
ಪೊರಡಲೆಮ್ಮಖಿಳ ಬಲವೆಂದ || 288 ||
ಅಸುರತ್ವದಿ ಭದ್ರ | ಕೇಶಿಯೆಂದಾ ನುಡಿಗೆ |
ಲೇಸೆಂದು ಸೈಗುಟ್ಟುತೆಲ್ಲ ||
ಘೋಷಿಸಲು ಕೂಡಿದ | ತ್ತಾ ಸಮಯದೊಳಗೆ ವಾ |
ರಾಶಿಯಂದದಿ ಚತುರ್ಬಲವು || 289 ||

**ಶಂಕರಾಭರಣ - ಮಟ್ಟೆ**
ಏನನೆಂಬೆ ಸಾಲ್ವನಸುರ |
ಸೇನೆ ಮಹಾ ರಜನಿಯೊಳಗೆ |
ಹಾನಿಗೈದು ನಡೆಸಿದಂಥ | ಹೀನ ಕೃತ್ಯವ ||
ಬೇನೆ ಕಳೆಯಲೆನುತ ನೃಪನ |
ಸೇನೆ ಗಾಢನಿದ್ರೆಗೈದ |
ಸ್ಥಾನ ಹೊಕ್ಕು ಸವರಿದರು ಕೃ | ಪಾಣಾದಿಗಳಲಿ || 290 ||

ಸಾಲುಗಟ್ಟಿ ಮಲಗಿದಾ ಕಾ |
ಲಾಳುಗಳನು ಘೋಟಕಂಗ |
ಳೋಳಿಗಳನು ಮತ್ತವಾರ | ಣಾಳಿಯೆಲ್ಲವ ||
ಏಳಗೊಡದೆ ಕುಂತ ಸಬಳ |
ಬಾಳುಗಳಲಿ ಸೀಳ್ದು ಪೊಳ್ದು |
ಕೇಳಿಯಾಡಿದರು ಕರಾಳ | ಖೂಳ ದೈತ್ಯರು || 291 ||
ಅತ್ತಲಿತ್ತ ಸುಳಿದು ಘೋರ |
ಹತ್ಯೆಯೆಸಗಲಾರ್ತನಾದ |
ವೆತ್ತು ಸುಭಟರರಸ್ತ್ರ ಶಸ್ತ್ರ | ಯುಕ್ತರಾಗಲು ||
ಕ್ಷಾತ್ರತೇಜದಿಂದ ಧರ್ಮ |
ಗುಪ್ತ ಧನುವ ಝೇಂಕರಿಸುತ |
ಸುತ್ತ ನೋಡಿ ನುಡಿದನಾ ವೀ | ರೋಕ್ತಿಯಿಂದಲಿ || 292 ||

**ಘಂಟಾರವ - ಅಷ್ಟ**
ಧೂರ್ತ ರಾಕ್ಷಸರಾರೊ ಬಂದೀ ರಾತ್ರಿ |
ಹೊತ್ತಿನಲಿ ಮಲಗಿರ್ಪ ಬಲವನು |
ಹತ್ಯೆಗೈವಧಮಾತ್ಮರು || 293 ||
ಬರಲಿ ಕೌಣಪ ಕರ್ಬುರಾಸುರರಾರೊ |
ಇರಲಿ ಭೂತಾಹುತಿಯನಿತ್ತಾ |
ಭರದಿ ಬಿತ್ತುವೆ ಕೀರ್ತಿಯ || 294 ||
ಎನಲು ಭೋಂಕನೆ ಭದ್ರಕೇಶಿಯು |
ಮೇಘಧ್ವನಿಯೊಳೆಂದನು ಕೇಳ್ವರಾರೆ |
ಮ್ಮನು ವರದ ಕೌಶಲ್ಯವ || 295 ||
ನೀತಿಯಾವುದೊ ರಾತ್ರಿ ನಿದ್ರೆಯೊಳಿರೆ |
ಘಾತಿಸುವ ಕೃತಿಯೇನು ಕೌಶಲ |
ಪೇತುಗಳಿಗೇನರಿವುದು || 296 ||
ಸಾಲ್ವನ ಪ್ರತಿಹತ ಸತ್ವವರಿಯದೆ |
ಬೀಳ್ವುದೇ ಹುಲಿಬಾಯ್ಗೆ ಕುರಿಯೋಲ್ |
ಸಲ್ವುದಾಯ್ತು ಹೆಮ್ಮಾರಿಗೆ || 297 ||
ಧರ್ಮಗುಪ್ತನ ಸತ್ವವನರಿಯದೆ |
ಹೆಮ್ಮೆಯೊದರದಿರಂದಿನಾ ಸ್ಥಿತಿ |
ನಿಮ್ಮವರ ಕೇಳ್ದರಿಯೆಲಾ || 298 ||
ಸುಡುಸುಡಾನುಡಿಯೆಮ್ಮ ಯುದ್ಧದಿ ಗೆದ್ದು |
ಪಡೆಯಲುಂಟೇ ರಾಜ್ಯವಂದಿನ |
ಬಡ ನೃಪರ ಕಥೆ ಬಲ್ಲೆಯಾ || 299 ||
ಎಂದು ಮುದ್ಗರವೆತ್ತಿ ಹೊಡೆಯಲದ |
ನಂದು ತಪ್ಪಿಸಿ ಘೋರ ಶಕ್ತಿಯ |
ಮುಂದೆಸೆದನಾಗುಪ್ತನು || 300 ||

**ಶರ ಷಟ್ಪದಿ (ಆರ್ಯಸವಾಯ್ - ಏಕ)**
ಭರಿತ ಶಕುತಿಯತಿ | ಭರದಿಂ ಮಸ್ತಕ |
ಕೆರಗಲು ಮೂರ್ಛಾವಸ್ಥೆಯಲಿ ||
ದುರುಳನೊರಗಲ | ಬ್ಬರದಿಂ ಸಾಲ್ವನು |
ಕರೆದೆಂದನು ಹೂಂಕರಿಸುತಲಿ || 301 ||

**ಆಹೇರಿ - ಮಟ್ಟೆ**

ಯಾರೆಲಾ ಮದಾಂಧ ತರಳನೇ || ಪ. ||
ಯಾರು ನೀನದಾರು ಗರ್ವ |
ವೇರಿ ಗಂಧರ್ವಾದಿ ಸೈನ್ಯ |
ಹೇರಿ ನಮ್ಮ ಪುರವ ಮುತ್ತಿ |
ಸೂರೆಗೆಯ್ಯಲೇನು ಸಾಲ್ವ |
ಧಾರಿಣಿಪನ ಬಲ್ಲೆಯೇನೆಲಾ | ರಣಾಂಗಣದಲಿ |
ಹೋರುವನಿತು ಸಹಸಿಯೇನೆಲಾ | ಹೆಮ್ಮಾರಿಯೆಡೆಗೆ |
ಸಾರಲಿರ್ಪ ಬಯಕೆಯೇನೆಲಾ || 302 ||
ಧಿರುರೆ ಸಾಲ್ವನಹುದೆ ನೀನೆ |
ನ್ನರಿತುದಿಲ್ಲವೇ ದುರಾತ್ಮ |
ಧರಣಿಪಾಲ ಸತ್ಯರಥನ |
ವರಕುಮಾರ ಧರ್ಮಗುಪ್ತ |
ಭರಿತ ಸಹಸಿಯಾನು ಕೇಳೆಲಾ | ಸ್ವರಾಜ್ಯಕಾಗಿ |
ಧುರವ ಸಾರಲಾಯ್ತು ನೋಡೆಲಾ | ನಿನ್ನುಸಿರನಳಿಸಿ |
ಮೆರಸಲಿಹೆನು ಕೀರ್ತಿಯನು ಭಲಾ || 303 ||
ಯಾರು ನೀನಾನ್ನೃಪನ ಸುತನೆ |
ಹಾರಿ ಬರಲದೇಕೊ ಸ್ವಾರ್ಥ |
ಪೂರಯಿಸುವುದುಂಟೆ ಧೀರೊ |
ದ್ಧಾರ ಪರಬಲಾಬ್ಧಿವಡಬ |
ಶೂರ ಸಾಲ್ವನೆಂಬುದರಿಯೆಲಾ | ಶಲಭಾಳಿಯಗ್ನಿ|
ಗೇರಿ ಸಾಯ್ವ ತೆರನಿದಾಯ್ತೆಲಾ | ಮುಂಬರುವನರ್ಥ |
ತಾರುಣ್ಯದಲಿ ತಿಳಿವುದೇನೆಲಾ || 304 ||

**ಪಂಚಾಗತಿ - ಮಟ್ಟೆ**

ಸೆಣಸಾಡಿದರವರು | ಕನಲುತಲಿದಿರು || ಪ. ||
ದನುಜನು ಮೇಘಾಸ್ತ್ರವ ಬಿಡ |
ಲನಿಲಾಸ್ತ್ರದಿ ತರಿಯೆ ||
ಅನಿಲಾಸ್ತ್ರವನೆಚ್ಚೊಡೆ ಫಣಿ |
ಯಣಗಿಸಿ ಬೊಬ್ಬಿರಿಯೆ || 305 ||
ಖಳನೆಸೆದೊಡೆ ಭುಜಗಾಸ್ತ್ರವ |
ನಳಿಸುತ ತಾರ್ಕ್ಷ್ಯನಲಿ ||
ಬಳಿಕನಲಾಸ್ತ್ರವ ಜಲದಲಿ |
ಮುಳುಗಿಸಲರಮಗನು || 306 ||
ಭರದಿಂ ಪ್ರಳಯದ ಬಿರುಮಳೆ |
ಸುರಿವಂದದಿ ಸಾಲ್ವ ||
ಸುರಿಸಿದನತ್ಯುಗ್ರ ಭಯಂ |
ಕರ ಶರವರ್ಷವನು || 307 ||
ಧರಣಿಪಸುತನರೆಕ್ಷಣ ಮೈ |
ಮರೆತಾಗಳೆ ಎದ್ದು |
ಸ್ಮರಿಸಿದನಗಜಾಂಬಿಕೆಯನು |
ಹರನಾಜ್ಞೆಯ ನೆನೆದು || 308 ||

**ಪರಿವರ್ಧಿನಿ ಷಟ್ಪದಿ**
ಜಯ ಜಯ ಜಗದೀಶ್ವರಿ ಮಾಹೇಶ್ವರಿ |
ಜಯ ವಿಜಯಪ್ರದೆ ಜಯತು ಸುಖಪ್ರದೆ |
ದಯೆದೋರೌ ಸಾಲ್ವನ ಸಂಹರಿಸುತ ನಮ್ಮೀ ಕಷ್ಟಗಳ ||
ನಯದಿಂ ಹರಿಸುತ ಕಾಯ್ವುಪುದೆನ್ನುತ |
ಭಯದಿಂ ಸಂಸ್ತುತಿಸುತ್ತಿರೆ ಮಾಯಾ |
ಮಯೆ ತಾಂ ಚಂಡಿಯ ರೂಪಂ ತಳೆದೈತಂದಳು ಬೊಬ್ಬಿಡುತ || 309 ||

**ಮಧ್ಯಮಾವತಿ - ತ್ರಿವುಡೆ (ಏನನೆಂಬೆ-ಪೊಡವಿಪ ಕೇಳಾ)**
ಏನನೆಂಬೆ || ಪ ||
ಏನೆಂಬೆನು  ಆ ಚಂಡಿಯ ನವರ |
ಕ್ವಾನನದಲಿ ಕೆಂಗಿಡಿಗಳನುಗುಳುತ |
ಬಾನತ್ತಲು ಮೈದೋರುತ ಖೇಟಕ್ಕ |
ಪಾಣಗಳಿಂದೈತರುವ ಮಹಾದ್ಭುತ | ವೇನನೆಂಬೆ || 310 ||
ಏನಿದು ಭೂತವೊ ಮೃತ್ಯುವೊ ಭೈರವಿ |
ಯೇನಿದು ರಣಮಾರಿಯೊ ಎಂದಸುರನು |
ಕಾಣುತಲಾರ್ಭಟಿಸಿದನೋಡದಿರೋ |
ತ್ರಾಣದಿ ಹಿಡಿ ಬಡಿರಟ್ಟಿರಿಯೆಂದನು | ಏನನೆಂಬೆ || 311 ||
ಸುತ್ತಲು ಕೌಣಪರತ್ತಿತ್ತಲು ಕಾ |
ರ್ಗತ್ತಲೆಯೆನೆ ಖಳಕುಲವಾವರಿಸಲು |
ಕುತ್ತಿದಳೊತ್ತಿದಳೆತ್ತುತ ಕತ್ತಿಯ |
ಕತ್ತರಿಸಿದಳಖಿಳರ ಮಾಂಕಾಳಿಯು || 312 ||
ಮೆಟ್ಟಿದಳೊಟ್ಟಿದ ಕರಿ ಹಯಗಳ ಪದ |
ಘಟ್ಟನೆಯಲಿ ತೇರ್ಗಳ ಪುಡಿಗೆಯ್ಯಲು |
ಕೆಟ್ಟೆವೆನುತ ಬಾಯ್ಬಿಟ್ಟಸುರಭಟರಾ |
ತಟ್ಟೋಡಿತು ಬೆನ್ನಟ್ಟುತ ಬರಲು || 313 ||
ಕಂಡಾ ಸಾಲ್ವನಮಾತ್ಯಸಹಿತ ಭಯ |
ಗೊಂಡೆತ್ತಲೊ ಬೆಂಗೊಟ್ಟೋಡಲು ರಣ |
ಚಂಡಿಕೆಯೈದಿದಳಾಗುಪ್ತಗೆ ಜಯ |
ಗೊಂಡಪೆಯೆಂದಭಯವನಿತ್ತೊಡನೆ || 314 ||

**ಕಂದ ಪದ್ಯ**
ಮೃಡನರಸಿಯು ಕಣ್ಮರೆಯಾ |
ದೊಡನಾ ಸಾಲ್ವೇಂದ್ರನೊಡಲಕ್ರೋಧಾನಲನಂ ||
ತಡೆಯದೆ ಬಂದಡ್ಡೈಸುತ |
ನುಡಿದಂ ಭೋರ್ಗುಡಿಸುತವನಿಪಾಲಾತ್ಮಜನೋಳ್ || 315 ||

**ಪಂತುವರಾಳಿ - ಮಟ್ಟೆ (ಪೂತುರೇ ಭಲಾ ಮಾತಿನಲಿ)**
ಬಾರೊ ಪೋರನೇ | ತೋರು ಬಲುಹನೆ |
ಮಾರಿಭೂತಾಹುತಿಯನೀವ | ಕಾರ್ಯವಿದೆ ಭಲಾ || 316 ||
ಗರುವವೇಕೆಲಾ | ಧುರವು ಸಾಕೆಲಾ |
ಮರುಳರಂತೆ ಭಯದೊಳೋಡಿ | ಮರಳಿ ಬಂದೆಯಾ || 317 ||
ಹುಡುಗನೆನುತ ನಾ | ಬಿಡಲು ತತ್ ಕ್ಷಣ |
ಬಡಿಯಿತೇನೊ ಮಾರಿ ಮಸಣ | ದೆಡೆಯ ತೋರ್ಪೆನಾ || 318 ||
ತರಿದೆಮ್ಮಯ್ಯನಾ | ಧರೆಯನಾಳ್ದಿಯ |
ಭರಿತ ದ್ರೋಹ ಮರೆಯಲುಂಟೆ | ತೆರುವೆ ಶಿಕ್ಷೆಯ || 319 ||
ತಂದೆಮಕ್ಕಳು | ಹೊಂದಿ ಬಾಳ್ವುದು |
ಚಂದವಿದುವೆ ಕಾಲ ಹೊಂದ | ಲೆಂದು ತಿಳಿದಿರೋ || 320 ||

ನುಡಿಯ ಪೌರುಷ | ಕೆಡುವ ಸಾಹಸ |
ಮಡಿಯಲೇತಕೆಮ್ಮ ರಾಜ್ಯ | ಕೊಡುವುದುಚಿತವು || 321 ||
ಕೊಡುವೆ ರಾಜ್ಯವ | ತೊಡುವ ಶರದಲಿ |
ತಡೆದುಕೋ ಎಂದೆಚ್ಚನಸ್ತ್ರ | ದಡಿಗ ಸಾಲ್ವನು || 322 ||
ತರಿದು ಬಿಸುಡುತ | ಧರುಮಗುಪ್ತನು |
ತಿರುಗಿ ಬರುವ ಶೈಲಾಸ್ತ್ರವನು | ತರಿದ ವಜ್ರದಿ || 323 ||

**ನಾದನಾಮಕ್ರಿಯೆ - ಅಷ್ಟ**
ಮತ್ತೆ ಸಾಲುವನೆಚ್ಚಸ್ತ್ರಗಳಲಿ | ಧರ್ಮ |
ಗುಪ್ತ ಮೈಮರೆತನವನಿಯಲ್ಲಿ ||
ಕತ್ತಿಯನೆತ್ತಲಾ ಧೂರ್ತನು | ಕೈ |
ಕಿತ್ತು ನುಡಿದನಿಂತು ವೀರನು || 324 ||
ಫಡ ದುಷ್ಟಾಧಮನೆ ನಿಲ್ಲೆಲೊ ನಿನ್ನ | ತಲೆ |
ಕಡಿದಿಕ್ಕಿ ದಿಗುಬಲಿ ಕೊಡುವೆ ನಾ ||
ಕಡುಸತ್ಯಾತ್ಮರ ತರಿವಧಮರ | ಬಾಳ |
ಲೆಡೆಗೊಟ್ಟರುಂಟೆ ಸದಾಚಾರ || 325 ||
ಏನೆಂದೆಯೆಲೊ ದುಷ್ಟನೆನುವೆಯಾ | ಎನ್ನ |
ಸ್ಥಾನಮಾನವನೆತ್ತಿ ಹಳಿವೆಯಾ ||
ನೀನಾರೊ ಜ್ಞಾನವಿಲ್ಲದೆ ಬಂದು | ವ್ಯರ್ಥ |
ಹಾನಿಹೊಂದುವುದೇಕೆ ನಡೆ ಮುಂದು || 326 ||
ಕ್ಷುಲ್ಲ ಬಲ್ಲೆಯ ವೀರಭದ್ರನ | ರಣ |
ಮಲ್ಲ ದಕ್ಷಗೆ ಶಿಕ್ಷೆಯಿತ್ತನಾ ||
ಸಾಲ್ವ ಕೇಳ್ ನಿನ್ನಸುವಳಿಸುತ | ಶೀಲ |
ವುಳ್ಳರ ಪೊರೆಯಲ್ಕೈದಿಹೆನಿತ್ತ || 327 ||
ವೀರನಹುದೆ ಭೂತಾಕಾರದಿ | ಮೈ |
ಹೇರಿ ಬಂದೂ ಲೋಕಾಚಾರದಿ ||
ಪಾರುಪತ್ಯಗಳೇಕೆ ನಡೆಯುತ್ತ | ನೀತಿ |
ಸಾರವ ಬಲ್ಲೆ ಸಾಯದಿರತ್ತ || 328 ||
ಪೃಥ್ವಿತ್ರಯವೆ ಬಲ್ಲುದೆನ್ನಯ | ಪಾರು |
ಪತ್ಯವನರಿಯದೆ ಗಜರ್ವೆಯ ||
ಸತ್ಯವಂತರನಿಕ್ಕಿ ಧಾಷ್ಟ್ರ್ಯದಿ | ಬಾಳ |
ಲೆತ್ತಲ್ಕೈದಲು ಬಿಡೆ ಸಾಮದಿ || 329 ||
ಏನ ಪೇಳ್ವೆಯೊ ಸಾಲ್ವನಿದಿರೊಳು | ಶೂಲ |
ಪಾಣಿಯೆ ನಿಲ್ಲಲಾಪನೆ ಪೇಳು ||
ನೀನೇಕೆ ಸೆಣಸಲಾಟಪೆಯೆಂದು | ಹೊಯ್ದ |
ನೇನೆಂಬೆ ಗದೆಯೊಳಾ ಖಳನಂದು || 330 ||
ಅನಿತರೊಳೆದ್ದು ಹೂಂಕರಿಸುತ | ನೃಪ |
ತನುಜನು ಧನುವ ಝೇಂಕರಿಸುತ |
ಘನದಿವ್ಯಾಸ್ತ್ರವನಾಯ್ದು ತೆಗೆದನು | ಸಿಂ |
ಜಿನಿಯನೆಳೆದು ಸೆಳೆದಿಟ್ಟನು || 331 ||

**ಭಾಮಿನಿ**
ದಕ್ಷರಿಪುವಿನ ರಕ್ಷೆಯಿಂ ನೃಪ |
ನಕ್ಷಿಯಲಿ ಕಿಡಿಗೆದರುತಸುರನ |
ಕುಕ್ಷಿಬಿರಿವಂತೆಸೆಯಲಾ ದಿವಾಸ್ತ್ರವನು ಭರದಿ ||
ರಕ್ಷಿಸುವರಾರಸುರರಾಯನ |
ಲಾಕ್ಷಣದಿ ಶಿರವರಿದು ಸಾಲುವ |
ರಾಕ್ಷಸನು ಧರೆಗೊರಗಿದನು ಕುಲಗಿರಿಗಳದುರ್ವಂತೆ || 332 ||

**ಸೌರಾಷ್ಟ್ರ - ತ್ರಿವುಡೆ**
ಸುರರು ಘೇಯೆಂದುಲಿದು ಪೂಮಳೆ |
ಗರೆಯಲಾ ನೃಪನಂದನನ ಭಯ |
ಹರಿಸಿ ಮರಳಿದನತ್ತ ವೀರೇ | ಶ್ವರನು ಬಳಿಕ || 333 ||
ಪರಿಕಿಸುತ ದ್ರುಮಿಳಾದಿ ಗಂಧ |
ರ್ವರು ನಲಿದರೆಮ್ಮಂಶುಮತಿಯಾ |
ಪರಮಭಾಗ್ಯದೊಳೊದಗಿದಳು ಜಯ | ಸಿರಿಯೆನುತ್ತ || 334 ||
ಕರೆಯಲಟ್ಟಿದರಂಶುಮತಿಯನು |
ಭರದಿ ಬಂದೆದೆಯಪ್ಪಿ ಪತಿಯೊಡ |
ವೆರಸಿ ಹರುಷಾಶ್ರುಗಳ ಸುರಿಸುತ | ಮೆರೆದಳಾಗ || 335 ||
ಬಳಿಕ ನೃಪಸುತನಾ ಸ್ವದೇಶಕೆ |
ನಲವಿನಿಂ ಪೊರಡಲ್ಕೆ ಸಕಲರು |
ಬಳಸಿದರು ನಾನಾ ಸುವಾದ್ಯ | ವಳಿಗಳೊಡನೆ ||336 ||
ಬರುತಿರಲ್ಕೆ ವಿದರ್ಭ ವಿಷಯಾಂ |
ತರದ ಜನರಾ ಧರ್ಮಗುಪ್ತನ |
ಹರುಷದಿಂದಿರ್ಗೊಂಡು ಕಾಣ್ಕೆಯ | ನಿರಿಸಲಡಿಗೆ || 337 ||
ರಾಜಪಟ್ಟವಗಟ್ಟಿ ಗುರು ಬುಧ |
ರೋಜೆಯಿಂ ಸತ್ಕರಿಸಲಾತನು |
ರಾಜಧರ್ಮದೊಳಾಳ್ದನಮರರ | ಭೂಜದಂತೆ || 338 ||
ಬರೆದನೀ ಸತ್ಕಥೆಯನಗಜಾ |
ವರನ ದಯೆಯಿಂ ವಿಷ್ಣು ಶರ್ಮನು |
ಸರಳಕನ್ನಡ ನುಡಿಯೊಳೆಲ್ಲರಿ | ಗರಿವ ತೆರದಿ || 339 ||
ವರುಷ ಪರಿಧಾವಿಯೊಳಗೈದನೆ |
ವರದಿವಸ ಮಾಸಂಗಳಲಿ ತಾ |
ನೊರೆದನೀತೆರ ಯಕ್ಷಗಾನದ | ಪರಿಯನರಿತು || 340 ||
ಓದಲಿದು ಸುವ್ರತಮಹಾತ್ಮೆಯ |
ಬೋಧಿಸುವ ಸತ್ಯಾತ್ಮರೊಳ್ಗತೆ |
ಯಾದಪುದು ಶುಭ ವಿಭವಸಂಪದ | ವಾದರಿಸಲು || 341 ||

**ಭಾಮಿನಿ**
ಹರಿಯ ದಯೆಯಿಂ ವಿಷ್ಣು ಶರ್ಮನು |
ಬರೆದನೀತೆರ ಕೃಷ್ಣವಿಜಯವ |
ಹರಿಯ ಲೀಲೆಯನಕ್ಷಕೇಳಿಯಶೋಕಸಂದರಿಯ ||
ಸಿರಿಯ ಕೌಸಲ್ಯೆಯವಿವಾಹವ |
ಪುರಹರನ ಕುಂಭಾಸಿ ಮಧುಪುರ |
ಕರಿಮುಖನ ಕಲಿಕರ್ಣ ಭೀಮರ ಚರಿತೆಗಳ ಮುದದಿ || 342 ||

**ಮಂಗಲಂ**
ಮಂಗಲಂ ಜಯ ಮಂಗಲಂ ಶ್ರುತಿ | ಸಂಗಗೆ ಭಸಿತಾಂಗಗೆ || ಪ ||
ನಂದಿವಾಹನ ಇಂದುಧರ ಸಾ | ನಂದಗೆ  ಗುಣಸಾಂದ್ರಗೆ ||
ಸ್ಕಂದಪಿತ ನಿರ್ದ್ವಂದ್ವ ಕರುಣಾ | ಸಿಂಧುಗೆ ಮುನಿವಂದ್ಯಗೆ || 343 ||
ಮಾರಮಥನಗೆ ಘೋರರೌದ್ರಾ | ಕಾರಗೆ ಓಂಕಾರಗೆ ||
ಸಾರಧರ್ಮೋದ್ಧಾರ ಶರಧಿಗ | ಭೀರಗೆ ಭವದೂರಗೆ || 344 ||
ಕಾಲಕಂಠಗೆ ಕಾಲನೇತ್ರ ನಿ | ರಾಳಗೆ ಜಿತಕಾಲಗೆ ||
ಸ್ಥೂಲಗಾತ್ರ ವಿಶಾಲ ಭಸ್ಮೋ | ದ್ಧೂಳಗೆ ತ್ರಿಶೂಲಿಗೆ || 345 ||
ದಕ್ಷಹರ ಭಾಳಾಕ್ಷ ಭುವನಾ | ಧ್ಯಕ್ಷಗೆ ಸುರಪಕ್ಷಗೆ ||
ಮೋಕ್ಷದಾತಗೆ ರಾಕ್ಷಸರಕುಲ | ಶಿಕ್ಷಗೆ ವಿಷಮಾಕ್ಷಗೆ || 346 ||
ದೋಷನಾಶ ಗಿರೀಶ ಭೂತಾ | ಧೀಶಗೆ ಫಣಿಭೂಷಗೆ ||
ಲೇಸುಗೈದೆಮ್ಮಾಶೆ ನಲಿಸುವ | ಈಶಗೆ ಮಾಲಿಂಗೇಶಗೆ || 347 ||

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ದಿನೇಶ್ ಪ್ರಿಂಟರ್ಸ್, ಬ್ರಹ್ಮಾವರ

**ಪ್ರಸಂಗ ಪ್ರತಿ ಆಧಾರ:** ದಿನೇಶ್ ಪ್ರಿಂಟರ್ಸ್, ಬ್ರಹ್ಮಾವರ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ರಘು ಮುಳಿಯ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಅನಿತ ರಾವ್, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ಅಶೋಕ ಮುಂಗಳೀಮನೆ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ